# ಕಳ್ಳಸಾಗಣೆದಾರರ ಮತ್ತು ವಿದೇಶಿ ವಿನಿಮಯದ ಕೈಚಳಕ ತೋರಿಸುವವರ (ಸ್ವತ್ತಿನ ಮುಟ್ಟುಗೋಲು) ಅಧಿನಿಯಮ, 1976

(1976ರ ಅಧಿನಿಯಮ ಸಂಖ್ಯೆ 13)

**[9-5-2003 ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 24 ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 15 ರಿಂದ 25 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಅನ್ವಯ
2ಎ. ಕೆಲವು ವ್ಯಕ್ತಿಗಳಿಗೆ ಅಧಿನಿಯಮವು ಅನ್ವಯವಾಗದಿರುವುದು
3. ಪರಿಭಾಷೆಗಳು
4. ಕಾನೂನು ಬಾಹಿರವಾಗಿ ಆರ್ಜಿಸಿದ ಸ್ವತ್ತನ್ನು ಧಾರಣ ಮಾಡುವುದರ ಬಗ್ಗೆ ನಿಷೇಧ
5. ಸಕ್ಷಮ ಪ್ರಾಧಿಕಾರಿ
6. ಮುಟ್ಟುಗೋಲಿನ ಬಗ್ಗೆ ನೋಟೀಸು
7. ಕೆಲವು ಪ್ರಕರಣಗಳಲ್ಲಿ ಸ್ವತ್ತಿನ ಮುಟ್ಟುಗೋಲು
8. ರುಜುವಾತಿನ ಭಾರ
9. ಮುಟ್ಟುಗೋಲಿನ ಬದಲಾಗಿ ಜುಲ್ಮಾನೆ
10. ಕೆಲವು ನ್ಯಾಸದ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಪ್ರಕ್ರಿಯೆ
11. ಕೆಲವು ವರ್ಗಾವಣೆಗಳು ಅಕೃತ ಮತ್ತು ಶೂನ್ಯವಾಗದಿರುವುದು
12. ಅಪೀಲು ನ್ಯಾಯಾಧಿಕರಣದ ರಚನೆ
13. ನೋಟೀಸು ಅಥವಾ ಆದೇಶವು ವಿವರಣೆಯಲ್ಲಿನ ತಪ್ಪಿಗಾಗಿ ಅಸಿಂಧುವಾಗದಿರುವುದು
14. ಅಧಿಕಾರ ವ್ಯಾಪ್ತಿಯ ಬಗ್ಗೆ ಪ್ರತಿಷೇಧ
15. ಸಕ್ಷಮ ಪ್ರಾಧಿಕಾರಿ ಮತ್ತು ಅಪೀಲು ನ್ಯಾಯಧಿಕರಣವು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರುವುದು
16. ಸಕ್ಷಮ ಪ್ರಾಧಿಕಾರಿಗೆ ಮಾಹಿತಿ
17. ಕೆಲವು ಅಧಿಕಾರಿಗಳು ಸಕ್ಷಮ ಪ್ರಾಧಿಕಾರಿ ಮತ್ತು ಅಪೀಲು ನ್ಯಾಯಾಧಿಕರಣಕ್ಕೆ ಸಹಾಯ ಮಾಡುವುದು
18. ಕೆಲವು ಅಧಿಕಾರಗಳನ್ನು ಚಲಾಯಿಸಲು ಕೆಲವು ಅಧಿಕಾರಿಗಳನ್ನು ಅಗತ್ಯಪಡಿಸಲು ಸಕ್ಷಮ ಪ್ರಾಧಿಕಾರಿಯ ಅಧಿಕಾರ
19. ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಧಿಕಾರ
20. ತಪ್ಪುಗಳನ್ನು ಸರಿಪಡಿಸುವುದು

21. ಇತರ ಕಾನೂನುಗಳ ಮೇರೆಗಿನ ನಿರ್ಣಯಗಳು ಈ ಅಧಿನಿಯಮದ ಮೇರೆಗಿನ ವ್ಯವಹಾರಗಳಿಗಾಗಿ ನಿರ್ಣಾಯಕವಾಗದಿರುವುದು
22. ನೋಟೀಸುಗಳು ಮತ್ತು ಆದೇಶಗಳ ಜಾರಿ
23. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ
24. ಅಧಿನಿಯಮವು ಅಧ್ಯಾರೋಹಿ ಪ್ರಭಾವವನ್ನು ಹೊಂದಿರುವುದು
25. ಅಧಿನಿಯಮದ ಉಪಬಂಧಗಳು ನ್ಯಾಸವಾಗಿರುವ ಕೆಲವು ಸ್ವತ್ತುಗಳಿಗೆ ಅನ್ವಯಗೊಳ್ಳದಿರುವುದು
26. ನಿಯಮ ರಚನಾಧಿಕಾರ
27. ನಿರಸನ ಮತ್ತು ಉಳಿಸುವಿಕೆ

# ಕಳ್ಳಸಾಗಣೆದಾರರ ಮತ್ತು ವಿದೇಶಿ ವಿನಿಮಯದಲ್ಲಿ ಕೈಚಳಕ ತೋರಿಸುವವರ (ಸ್ವತ್ತಿನ ಮುಟ್ಟುಗೋಲು) ಅಧಿನಿಯಮ, 1976

(1976ರ ಅಧಿನಿಯಮ ಸಂಖ್ಯೆ 13)

[25ನೇ ಜನವರಿ, 1976]

ಕಳ್ಳಸಾಗಣೆದಾರರು ಮತ್ತು ವಿದೇಶೀ ವಿನಿಮಯದಲ್ಲಿ ಕೈಚಳಕ ತೋರಿಸುವವರು ಕಾನೂನು ಬಾಹಿರವಾಗಿ ಆರ್ಜಿಸಿದ ಅವರ ಸ್ವತ್ತುಗಳ ಮುಟ್ಟುಗೋಲಿಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ರಾಷ್ಟ್ರೀಯ ಅರ್ಥ ವ್ಯವಸ್ಥೆಯ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರುವಂಥ ಕಳ್ಳಸಾಗಣೆ ಚಟುವಟಿಕೆಗಳನ್ನು ಮತ್ತು ವಿದೇಶೀ ವಿನಿಮಯದಲ್ಲಿನ ಕೈಚಳಕಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟುವುದಕ್ಕಾಗಿ, ಅಂಥ ಚಟುವಟಿಕೆಗಳು ಮತ್ತು ಕೈಚಳಕಗಳಲ್ಲಿ ತೊಡಗಿರುವ ವ್ಯಕ್ತಿಗಳಿಂದ, ಅವರು ಅನ್ಯಾಯವಾಗಿ ಆರ್ಜಿಸಿರುವ ಗಳಿಕೆಗಳನ್ನು ಕಸಿದುಕೊಳ್ಳುವುದು ಅವಶ್ಯವಾಗಿರುವುದರಿಂದ;

ಮತ್ತು ಅಂಥ ವ್ಯಕ್ತಿಗಳು ಸಂಪತ್ತು ತೆರಿಗೆ, ಆದಾಯ ತೆರಿಗೆ ಅಥವಾ ಇತರ ಕಾನೂನುಗಳನ್ನು ಉಲ್ಲಂಘಿಸುವ ಮೂಲಕ ಮತ್ತು ಇತರ ಮಾರ್ಗಗಳ ಮೂಲಕ ಅಂಥ ಗಳಿಕೆಗಳನ್ನು ಹೆಚ್ಚಿಸಿಕೊಳ್ಳುತ್ತಿರುವುದರಿಂದ ಮತ್ತು ಆ ಮೂಲಕ ಮುಚ್ಚುಮರೆಯ ರೀತಿಯಲ್ಲಿ ಕಾರ್ಯಾಚರಣೆಯನ್ನು ಮಾಡಲು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುತ್ತಿರುವುದರಿಂದ;

ಮತ್ತು ಅಂಥ ವ್ಯಕ್ತಿಗಳು, ಅನೇಕ ಪ್ರಕರಣಗಳಲ್ಲಿ ಅಂಥ ಗಳಿಕೆಗಳ ಮೂಲಕ ಅವರು ಆರ್ಜಿಸಿರುವ ಸ್ವತ್ತುಗಳನ್ನು ತಮ್ಮ ಸಂಬಂಧಿಕರು, ಸಹವರ್ತಿಗಳು ಮತ್ತು ಆಪ್ತ ಸ್ನೇಹಿತರ ಹೆಸರಿನಲ್ಲಿ ಹೊಂದಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತಾರನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕಳ್ಳಸಾಗಣೆದಾರರ ಮತ್ತು ವಿದೇಶಿ ವಿನಿಮಯದಲ್ಲಿ ಕೈಚಳಕ ತೋರಿಸುವವರ (ಸ್ವತ್ತಿನ ಮುಟ್ಟುಗೋಲು) ಅಧಿನಿಯಮ, 1976 ಎಂದು ಕರೆಯತಕ್ಕುದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು 1975ರ ನವೆಂಬರ್ 5ನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕುದು.

**2. ಅನ್ವಯ.**- (1)ಈ ಅಧಿನಿಯಮದ ಉಪಬಂಧಗಳು, (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ವ್ಯಕ್ತಿಗಳಿಗೆ ಮಾತ್ರ ಅನ್ವಯವಾಗತಕ್ಕುದು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳು ಈ ಕೆಳಕಂಡವರು ಆಗಿರುತ್ತಾರೆ, ಎಂದರೆ:-

(ಎ) (i) ಒಂದು ಲಕ್ಷ ರೂಪಾಯಿಗಳನ್ನು ಮೀರಿದ ಮೌಲ್ಯದ ಸರಕುಗಳಿಗೆ ಸಂಬಂಧಪಟ್ಟಂತೆ, ಸಮುದ್ರ ಸೀಮಾಸುಂಕ ಅಧಿನಿಯಮ, 1878 (1878ರ 8) ಅಥವಾ ಸೀಮಾ ಸುಂಕ ಅಧಿನಿಯಮ, 1962 (1962ರ 52)ರ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿರುವ; ಅಥವಾ

(ii) ಒಂದು ಲಕ್ಷ ರೂಪಾಯಿಗಳನ್ನು ಮೀರುವಂಥ ಮೊಬಲಗು ಅಥವಾ ಮೌಲ್ಯವನ್ನು ಒಳಗೊಂಡಿರುವ ಅಪರಾಧದ ಬಗ್ಗೆ ವಿದೇಶೀ ವಿನಿಮಯ ನಿಯಂತ್ರಣ ಅಧಿನಿಯಮ, 1947 (1947ರ 7) ಅಥವಾ ವಿದೇಶೀ ವಿನಿಮಯ ನಿಯಂತ್ರಣ ಅಧಿನಿಯಮ, 1973 (1973ರ 46)ರ ಮೇರೆಗೆ ಅಪರಾಧಿ ಎಂದು ನಿರ್ಣೀತನಾಗಿರುವ; ಅಥವಾ

(iii) ಸಮುದ್ರ ಸೀಮಾ ಸುಂಕ ಅಧಿನಿಯಮ, 1878ರ (1878ರ 8) ಅಥವಾ ಸೀಮಾಸುಂಕ ಅಧಿನಿಯಮ, 1962 (1962ರ 52)ರ ಮೇರೆಗೆ ಅಪರಾಧಿ ಎಂದು ನಿರ್ಣೀತನಾಗಿದ್ದು, ತರುವಾಯದಲ್ಲಿ ಆ ಎರಡು ಅಧಿನಿಯಮಗಳ ಮೇರೆಗೆ ಅಪರಾಧಿ ಎಂದು ನಿರ್ಣೀತನಾಗಿರುವ; ಅಥವಾ

(iv) ವಿದೇಶೀ ವಿನಿಮಯ ನಿಯಂತ್ರಣ ಅಧಿನಿಯಮ, 1947 (1947ರ 7) ಅಥವಾ ವಿದೇಶೀ ವಿನಿಮಯ ನಿಯಂತ್ರಣ ಅಧಿನಿಯಮ, 1973 (1973ರ 46)ರ ಮೇರೆಗೆ ಅಪರಾಧಿ ಎಂದು ನಿರ್ಣೀತನಾಗಿದ್ದು, ತರುವಾಯದಲ್ಲಿ ಆ ಎರಡು ಅಧಿನಿಯಮಗಳ ಮೇರೆಗೆ ಅಪರಾಧಿ ಎಂದು ನಿರ್ಣೀತನಾಗಿರುವ ಪ್ರತಿಯೊಬ್ಬ ವ್ಯಕ್ತಿ;

(ಬಿ) ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ವಿದೇಶೀ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಾಣಿಕೆ ಚಟುವಟಿಕೆಗಳನ್ನು ತಡೆಗಟ್ಟುವ ಅಧಿನಿಯಮ, 1974 (1974ರ 52)ರ ಮೇರೆಗೆ ಬಂಧನ ಆದೇಶವನ್ನು ಮಾಡಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿ:

ಪರಂತು,-

(i) ಸದರಿ ಅಧಿನಿಯಮದ 9ನೇ ಪ್ರಕರಣದ ಅಥವಾ 12ಎ ಪ್ರಕರಣದ ಉಪಬಂಧಗಳು ಅನ್ವಯವಾಗದಂಥ ಆದೇಶವಾಗಿರುವ, ಅಂಥ ಬಂಧನ ಆದೇಶವನ್ನು ಸದರಿ ಅಧಿನಿಯಮದ 8ನೇ ಪ್ರಕರಣದ ಮೇರೆಗಿನ ಸಲಹಾ ಮಂಡಲಿಯ ವರದಿಯ ಮೇಲೆ ಅಥವಾ ಸಲಹಾ ಮಂಡಲಿಯ ವರದಿಯನ್ನು ಸ್ವೀಕರಿಸುವುದಕ್ಕೆ ಮುಂಚೆ ಅಥವಾ ಸಲಹಾ ಮಂಡಲಿಗೆ ಒಪ್ಪಿಸುವುದಕ್ಕೆ ಮುಂಚೆ ರದ್ದುಗೊಳಿಸಿರಕೂಡದು; ಅಥವಾ

(ii) ಸದರಿ ಅಧಿನಿಯಮದ 9ನೇ ಪ್ರಕರಣದ ಉಪಬಂಧಗಳು ಅನ್ವಯವಾಗುವಂಥ ಆದೇಶವಾಗಿರುವ, ಅಂಥ ಬಂಧನದ ಆದೇಶವನ್ನು 9ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗಿನ ಪುನರವಲೋಕನಕ್ಕಾಗಿನ ಕಾಲವು ಮುಕ್ತಾಯವಾಗುವುದಕ್ಕೆ ಮುಂಚೆ, ಅಥವಾ ಅದರ ಆಧಾರದ ಮೇಲೆ ಅಥವಾ ಸದರಿ ಅಧಿನಿಯಮದ 9ನೇ ಪ್ರಕರಣದ (2)ನೇ ಉಪ-ಪ್ರಕರಣವನ್ನು ಓದಿಕೊಂಡು 8ನೇ ಪ್ರಕರಣದ ಮೇರೆಗೆ ಸಲಹಾ ಮಂಡಲಿಯ ವರದಿಯ ಮೇಲೆ ರದ್ದುಗೊಳಿಸಿರಕೂಡದು; ಅಥವಾ

, (iii) ಸದರಿ ಅಧಿನಿಯಮದ 12ಎ ಪ್ರಕರಣದ ಉಪಬಂಧಗಳು ಅನ್ವಯವಾಗುವಂಥ ಆದೇಶವಾಗಿರುವ, ಅಂಥ ಬಂಧನದ ಆದೇಶವನ್ನು, ಆ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗಿನ ಮೊದಲ ಪುನರವಲೋಕನಕ್ಕಾಗಿನ ಕಾಲವು ಮುಕ್ತಾಯವಾಗುವುದಕ್ಕೆ ಮುಂಚೆ ಅಥವಾ ಅದರ ಆಧಾರದ ಮೇಲೆ, ಅಥವಾ ಆ ಪ್ರಕರಣದ 12ಎ ಪ್ರಕರಣದ (6)ನೇ ಉಪ-ಪ್ರಕರಣವನ್ನು ಓದಿಕೊಂಡು 8ನೇ ಪ್ರಕರಣದ ಮೇರೆಗೆ ಸಲಹಾ ಮಂಡಲಿಯ ವರದಿಯ ಆಧಾರದ ಮೇಲೆ ರದ್ದುಗೊಳಿಸಿರಕೂಡದು; ಅಥವಾ

(iv) ಅಂಥ ಬಂಧನದ ಆದೇಶವನ್ನು ಸಕ್ಷಮ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯವು ರದ್ದುಗೊಳಿಸಿರಕೂಡದು;

(ಸಿ) (ಎ) ಖಂಡ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ವ್ಯಕ್ತಿಯ ಸಂಬಂಧಿಯಾಗಿರುವ ಪ್ರತಿಯೊಬ್ಬ ವ್ಯಕ್ತಿ;

(ಡಿ) (ಎ) ಖಂಡ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ವ್ಯಕ್ತಿಯ ಪ್ರತಿಯೊಬ್ಬ ಸಹವರ್ತಿ;

(ಇ) ಸದ್ಯದ ಧಾರಕ ಅಥವಾ ಸಂದರ್ಭಾನುಸಾರ, ಅಂಥ ವ್ಯಕ್ತಿಯ ತರುವಾಯ ಮತ್ತು ಸದ್ಯದ ಧಾರಕನಿಗೆ ಮುಂಚೆ ಅಂಥ ಸ್ವತ್ತನ್ನು ಧಾರಣ ಮಾಡಿರುವ, ಸಾಕಷ್ಟು ಪ್ರತಿಫಲಕ್ಕಾಗಿ ಸದ್ಭಾವನೆಯಿಂದ ವರ್ಗಾವಣೆ ಪಡೆದಿರುವವನು ಅಥವಾ ಪಡೆದಿದ್ದವನು ಆಗಿದ್ದ ಹೊರತು, (ಎ) ಖಂಡ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ವ್ಯಕ್ತಿಯು ಯಾವುದೇ ಕಾಲದಲ್ಲಿ ಈ ಹಿಂದೆ ಧಾರಣ ಮಾಡಿದ್ದಂಥ ಯಾವುದೇ ಸ್ವತ್ತಿನ ಯಾವನೇ ಧಾರಕ (ಈ ಖಂಡದಲ್ಲಿ ಇನ್ನು ಮುಂದೆ ಸದ್ಯದ ಧಾರಕನೆಂದು ಉಲ್ಲೇಖಿಸಲಾಗಿದೆ).

**ವಿವರಣೆ1:–** (ಎ) ಖಂಡದ (1)ನೇ ಉಪಖಂಡದ ಉದ್ದೇಶಗಳಿಗಾಗಿ ಯಾವ ಸರಕುಗಳಿಗೆ ಸಂಬಂಧಪಟ್ಟಂತೆ ಒಬ್ಬ ವ್ಯಕ್ತಿಯು ಅಪರಾಧಿ ಎಂದು ನಿರ್ಣೀತನಾಗಿರುವನೋ ಆ ಯಾವುವೇ ಸರಕುಗಳ ಮೌಲ್ಯವು, ಆ ಅಪರಾಧವನ್ನು ಮಾಡಿದ ದಿನಾಂಕದಂದು ಭಾರತದಲ್ಲಿ ವ್ಯಾಪಾರದ ಸಾಮಾನ್ಯ ಕ್ರಮದಲ್ಲಿನ ಸರಕುಗಳ ಸಗಟು ಮಾರಾಟ ಬೆಲೆಯಾಗಿರತಕ್ಕುದು.

**ವಿವರಣೆ2:–** (ಸಿ) ಖಂಡದ ಉದ್ದೇಶಗಳಿಗಾಗಿ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಂತೆ "ಸಂಬಂಧಿ" ಎಂದರೆ,–

(i) ಆ ವ್ಯಕ್ತಿಯ ಗಂಡ/ಹೆಂಡತಿ;

(ii) ಆ ವ್ಯಕ್ತಿಯ ಸಹೋದರ ಅಥವಾ ಸಹೋದರಿ;

(iii) ಆ ವ್ಯಕ್ತಿಯ ಗಂಡ/ಹೆಂಡತಿಯ ಸಹೋದರ ಅಥವಾ ಸಹೋದರಿ;

(iv) ಆ ವ್ಯಕ್ತಿಯ ಯಾವನೇ ಪಿತೃವಂಶೀಯ ಪೂರ್ವಜ ಅಥವಾ ಪಿತೃವಂಶೀಯ;

(v) ಆ ವ್ಯಕ್ತಿಯ ಗಂಡ/ಹೆಂಡತಿಯ ಯಾವನೇ ಪಿತೃವಂಶೀಯ ಪೂರ್ವಜ ಅಥವಾ ಪಿತೃವಂಶೀಯ;

(vi) (ii)ನೇ ಖಂಡ, (iii)ನೇ ಖಂಡ, (iv)ನೇ ಖಂಡ ಅಥವಾ (v)ನೇ ಖಂಡದಲ್ಲಿ ಉಲ್ಲೇಖಿಸಿರುವ ವ್ಯಕ್ತಿಯ ಗಂಡ/ಹೆಂಡತಿ;

(vii) (ii)ನೇ ಖಂಡ ಅಥವಾ (iii)ನೇ ಖಂಡಲ್ಲಿ ಉಲ್ಲೇಖಿಸಿರುವ ವ್ಯಕ್ತಿಯ ಯಾವನೇ ಪಿತೃವಂಶೀಯ;

**ವಿವರಣೆ 3**.– (ಡಿ) ಖಂಡದ ಉದ್ದೇಶಗಳಿಗಾಗಿ, ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಂತೆ "ಸಹವರ್ತಿ" ಎಂದರೆ,–

(i) ಅಂಥ ವ್ಯಕ್ತಿಯ ವಾಸದ ಆವರಣದಲ್ಲಿ (ಔಟ್‌ಹೌಸ್‌ಗಳನ್ನು ಒಳಗೊಂಡು) ವಾಸವಾಗಿದ್ದ ಅಥವಾ ವಾಸಿಸುತ್ತಿರುವ ಯಾರೇ ವ್ಯಕ್ತಿ;

(ii) ಅಂಥ ವ್ಯಕ್ತಿಯ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದ ಅಥವಾ ನಿರ್ವಹಿಸುತ್ತಿರುವ ಅಥವಾ ಲೆಕ್ಕಪತ್ರಗಳನ್ನು ಇಟ್ಟಿದ್ದ ಅಥವಾ ಇಟ್ಟಿರುವ ಯಾರೇ ವ್ಯಕ್ತಿ;

(iii) ಅಂಥ ವ್ಯಕ್ತಿಯು ಸದಸ್ಯ, ಪಾಲುದಾರ ಅಥವಾ ನಿರ್ದೇಶಕನಾಗಿದ್ದ ಅಥವಾ ಆಗಿರುವ, ಕಂಪನಿಗಳ ಅಧಿನಿಯಮ, 1956 (1956ರ 1) ರ ಅರ್ಥ ವ್ಯಾಪ್ತಿಯೊಳಗೆ ವ್ಯಕ್ತಿಗಳ ಯಾವುದೇ ಸಂಘ, ವ್ಯಕ್ತಿಗಳ ನಿಕಾಯ, ಪಾಲುಗಾರಿಕೆ ಫರ್ಮು ಅಥವಾ ಖಾಸಗಿ ಕಂಪನಿ;

(iv) ಅಂಥ ವ್ಯಕ್ತಿಯು, ಅಂಥ ಸಂಘ, ನಿಕಾಯ, ಪಾಲುಗಾರಿಕೆ ಫರ್ಮು ಅಥವಾ ಖಾಸಗಿ ಕಂಪನಿಯ ಸದಸ್ಯ, ಪಾಲುಗಾರ ಅಥವಾ ನಿರ್ದೇಶಕನಾಗಿದ್ದಾಗ ಅಥವಾ ಆಗಿರುವಾಗ,

ಯಾವುದೇ ಕಾಲದಲ್ಲಿ (iii)ನೇ ಖಂಡದಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳ ಸಂಘ, ವ್ಯಕ್ತಿಗಳ ನಿಕಾಯ, ಪಾಲುಗಾರಿಕೆ ಫರ್ಮು ಅಥವಾ ಖಾಸಗಿ ಕಂಪನಿಯ ಸದಸ್ಯ, ಪಾಲುದಾರ ಅಥವಾ ನಿರ್ದೇಶಕನಾಗಿದ್ದ ಅಥವಾ ಆಗಿರುವ ಯಾರೇ ವ್ಯಕ್ತಿ;

(v) (iii)ನೇ ಖಂಡದಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳ ಯಾವುದೇ ಸಂಘ, ವ್ಯಕ್ತಿಗಳ ನಿಕಾಯ, ಪಾಲುಗಾರಿಕೆ ಫರ್ಮು ಅಥವಾ ಖಾಸಗಿ ಕಂಪನಿಯ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದ ಅಥವಾ ನಿರ್ವಹಿಸುತ್ತಿರುವ ಅಥವಾ ಲೆಕ್ಕಪತ್ರಗಳನ್ನು ಇಟ್ಟಿದ್ದ ಅಥವಾ ಇಟ್ಟಿರುವ ಯಾರೇ ವ್ಯಕ್ತಿ;

(vi) (ಎ) ಆ ನ್ಯಾಸವನ್ನು ಅಂಥ ವ್ಯಕ್ತಿಯು ಸೃಜಿಸಿರುವಲ್ಲಿ; ಅಥವಾ

(ಬಿ) ನ್ಯಾಸಕ್ಕೆ ಅಂಥ ವ್ಯಕ್ತಿಯು ವಂತಿಗೆಯಾಗಿ ಕೊಟ್ಟ ಆಸ್ತಿಗಳ ಮೌಲ್ಯವು, (ಇದಕ್ಕೂ ಮುಂಚೆ ಅವನು ವಂತಿಗೆಯಾಗಿ ಕೊಟ್ಟ ಆಸ್ತಿಗಳು ಯಾವುವಾದರೂ ಇದ್ದರೆ ಅವುಗಳ ಮೌಲ್ಯವನ್ನು ಒಳಗೊಂಡು) ಆ ವಂತಿಗೆಗಳನ್ನು ಕೊಟ್ಟಿರುವಂಥ ದಿನಾಂಕದಂದು, ಆ ದಿನಾಂಕದಂದು ಇದ್ದ ಆ ನ್ಯಾಸದ ಆಸ್ತಿಗಳ ಮೌಲ್ಯಗಳ ಶೇಕಡಾ ಇಪ್ಪತ್ತಕ್ಕಿಂತ ಕಡಿಮೆಯಾಗಿಲ್ಲದಿರುವಲ್ಲಿ

–ಯಾವುದೇ ನ್ಯಾಸದ ನ್ಯಾಸಧಾರಿ;

(vii) ಸಕ್ಷಮ ಪ್ರಾಧಿಕಾರವು ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ, ಅಂಥ ವ್ಯಕ್ತಿಯ ಯಾವುವೇ ಸ್ವತ್ತುಗಳನ್ನು ಅವನ ಪರವಾಗಿ ಯಾವನೇ ಇತರ ವ್ಯಕ್ತಿಯು ಧಾರಣ ಮಾಡಿರುವಲ್ಲಿ ಅಂಥ ಇತರ ವ್ಯಕ್ತಿ;

**ವಿವರಣೆ4:**– ಯಾರೇ ವ್ಯಕ್ತಿಯು, ಈ ಅಧಿನಿಯಮದ ಉಪ–ಬಂಧಗಳು ಅನ್ವಯವಾಗುವ ವ್ಯಕ್ತಿಯಾಗಿರುವನೇ ಹೇಗೆ ಎಂಬ ಪ್ರಶ್ನೆಯನ್ನು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಸಂಭವಿಸಿದ ಅಥವಾ ನಡೆದಂಥ ಯಾವುದೇ ಅಪರಾಧ ನಿರ್ಣಯ ಅಥವಾ ಬಂಧನವು ಒಳಗೊಂಡಂತೆ ಯಾವುವೇ ಸಂಗತಿಗಳು, ಸಂದರ್ಭಗಳು ಅಥವಾ ಘಟನೆಗಳಿಗೆ ಸಂಬಂಧಪಟ್ಟಂತೆ ನಿರ್ಧರಿಸಬಹುದೆಂದು ಸಂದೇಹ ನಿವಾರಣೆಗಾಗಿ ಈ ಮೂಲಕ ಉಪಬಂಧಿಸಲಾಗಿದೆ.

**2ಎ. ಕೆಲವು ವ್ಯಕ್ತಿಗಳಿಗೆ ಈ ಅಧಿನಿಯಮವು ಅನ್ವಯವಾಗದಿರುವುದು.**– ನಿದ್ರಾಜನಕ ಔಷಧಗಳು ಮತ್ತು ಮನೋ ಉದ್ರೇಕಕಾರಿ ಪದಾರ್ಥಗಳ ಅಧಿನಿಯಮ, 1985ರ ಅಧ್ಯಾಯ ಎ. ಉಪಬಂಧಗಳು, ಆ ಅಧ್ಯಾಯದ ಮೇರೆಗೆ ಯಾವ ವ್ಯಕ್ತಿಗಳ ಸಂಬಂಧದಲ್ಲಿ ಯಾವುದೇ ಆದೇಶವನ್ನು ಮಾಡಬಹುದೋ, ಅಥವಾ ವ್ಯವಹರಣೆಗಳನ್ನು ಕೈಗೊಳ್ಳಬಹುದೋಆ ವ್ಯಕ್ತಿಗಳಿಗೆ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕುದಲ್ಲ.

**3. ಪರಿಭಾಷೆಗಳು.**– (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, –

(ಎ) "ಅಪೀಲು ನ್ಯಾಯಾಧಿಕರಣ" ಎಂದರೆ 12ನೇ ಪ್ರಕರಣದ ಮೇರೆಗೆ ರಚಿಸಿದ, ಮುಟ್ಟುಗೋಲು ಹಾಕಿಕೊಂಡ ಸ್ವತ್ತಿನ ಅಪೀಲು ನ್ಯಾಯಾಧಿಕರಣ;

(ಬಿ) "ಸಕ್ಷಮ ಪ್ರಾಧಿಕಾರಿ" ಎಂದರೆ, ಈ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರಿಯ ಪ್ರಕಾರ್ಯಗಳನ್ನು ನೆರವೇರಿಸಲು ಕೇಂದ್ರ ಸರ್ಕಾರವು 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಧಿಕೃತಗೊಳಿಸಿದ ಕೇಂದ್ರ ಸರ್ಕಾರದ ಒಬ್ಬ ಅಧಿಕಾರಿ;

(ಸಿ) ಈ ಅಧಿನಿಯಮವು ಅನ್ವಯವಾಗುವ ಯಾವನೇ ವ್ಯಕ್ತಿಗೆ ಸಂಬಂಧಪಟ್ಟಂತೆ "ಕಾನೂನು ಬಾಹಿರವಾಗಿ ಆರ್ಜಿಸಿದ ಸ್ವತ್ತು" ಎಂದರೆ–

(i) ಅಂಥ ವ್ಯಕ್ತಿಯು, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯಾಗಲೀ ಅಥವಾ ತರುವಾಯವಾಗಲೀ, ಯಾವ ವಿಷಯಕ್ಕೆ ಸಂಬಂಧಿಸಿದಂತೆ ಸಂಸತ್ತು ಕಾನೂನುಗಳನ್ನು ರಚಿಸಲು ಅಧಿಕಾರಗಳನ್ನು ಹೊಂದಿರುವುದೋ ಆ ವಿಷಯಕ್ಕೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ

ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಷೇಧಿಸಿರುವ ಯಾವುದೇ ಚಟುವಟಿಕೆಯಿಂದ ದೊರೆತ ಅಥವಾ ಪಡೆದ ಅಥವಾ ಅಂಥ ನಿಷೇಧಿತ ಚಟುವಟಿಕೆಯ ಕಾರಣದಿಂದ ಬಂದಿದೆ ಎಂದು ಹೇಳಬಹುದಾದ ಯಾವುದೇ ಆದಾಯ, ಗಳಿಕೆಗಳು ಅಥವಾ ಆಸ್ತಿಗಳಿಂದ ಅಥವಾ ಅವುಗಳ ಮೂಲಕ ಪೂರ್ಣವಾಗಿ ಅಥವಾ ಭಾಗಶಃ ಆರ್ಜಿಸಿದ ಯಾವುದೇ ಸ್ವತ್ತು; ಅಥವಾ

(ii) ಅಂಥ ವ್ಯಕ್ತಿಯು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯೇ ಆಗಲಿ ಅಥವಾ ಅದರ ತರುವಾಯವೇ ಆಗಲಿ, ಯಾವುದಕ್ಕೆ ಸಂಬಂಧಿಸಿದಂತೆ ಯಾವುದೇ ಅಂಥ ಕಾನೂನನ್ನು ಉಲ್ಲಂಘಿಸಲಾಗಿದೆಯೋ ಆ ಯಾವುದೇ ಆದಾಯ, ಗಳಿಕೆಗಳು ಅಥವಾ ಆಸ್ತಿಗಳಿಂದ ಅಥವಾ ಅವುಗಳ ಮೂಲಕ ಪೂರ್ಣವಾಗಿ ಅಥವಾ ಭಾಗಶಃ ಆರ್ಜಿಸಿದ ಯಾವುದೇ ಸ್ವತ್ತು; ಅಥವಾ

(iii) ಅಂಥ ವ್ಯಕ್ತಿಯು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯೇ ಆಗಲಿ ಅಥವಾ ಅದರ ತರುವಾಯವೇ ಆಗಲಿ ಯಾವುದರ ಮೂಲವನ್ನು ರುಜುವಾತು ಪಡಿಸಲು ಆಗುವುದಿಲ್ಲವೋ ಅಥವಾ ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಸಂಸತ್ತು ಕಾನೂನುಗಳನ್ನು ಮಾಡಲು ಅಧಿಕಾರವನ್ನು ಹೊಂದಿರುವುದಿಲ್ಲವೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಮಾಡಿದ ಯಾವುದೇ ಕೃತ್ಯ ಅಥವಾ ಕಾರ್ಯದ ಕಾರಣದಿಂದ ಎಂದು ಹೇಳಬಹುದಾಗಿದ್ದು ಅದನ್ನು ತೋರಿಸುವುದಕ್ಕೆ ಆಗುವುದಿಲ್ಲವೋ, ಆ ಯಾವುದೇ ಆದಾಯ, ಗಳಿಕೆಗಳು ಅಥವಾ ಆಸ್ತಿಗಳಿಂದ ಅಥವಾ ಅವುಗಳ ಮೂಲಕ ಪೂರ್ಣವಾಗಿ ಅಥವಾ ಭಾಗಶಃ ಆರ್ಜಿಸಿದ ಯಾವುದೇ ಸ್ವತ್ತು; ಅಥವಾ

(iv) ಅಂಥ ವ್ಯಕ್ತಿಯು, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯೇ ಆಗಲಿ ಅಥವಾ ತರುವಾಯವೇ ಆಗಲಿ ಪ್ರತಿಫಲ ನೀಡಿ ಅಥವಾ (i)ರಿಂದ (iii) ರ ವರೆಗಿನ ಉಪ-ಖಂಡಗಳಲ್ಲಿ ಉಲ್ಲೇಖಿಸಿದ ಯಾವುದೇ ಸ್ವತ್ತು ಅಥವಾ ಅಂಥ ಸ್ವತ್ತಿನ ಆದಾಯ ಅಥವಾ ಗಳಿಕೆಗಳಿಂದ ಪೂರ್ಣವಾಗಿ ಅಥವಾ ಭಾಗಶಃ ಆರ್ಜಿಸಿದ ಅಥವಾ ಯಾವುವೇ ಸಾಧನಗಳ ಮೂಲಕ ಆರ್ಜಿಸಿದ ಯಾವುದೇ ಸ್ವತ್ತು ;

ಮತ್ತು ಅದು,-

(A) ಅಂಥ ವ್ಯಕ್ತಿಯ ಅಥವಾ ಅಂಥ ಮುಂಚಿನ ಧಾರಕನ ತರುವಾಯ, ಯಾವುದೇ ಕಾಲದಲ್ಲಿ ಆ ಸ್ವತ್ತನ್ನು ಧಾರಣ ಮಾಡಿದ್ದ ಯಾವನೇ ಇತರ ವ್ಯಕ್ತಿ ಅಥವಾ ಅಂಥ ಮುಂಚಿನ ಧಾರಕರು ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿಗೆಯಾಗಿರುವಲ್ಲಿ, ಅಂಥ ಮುಂಚಿನ ಧಾರಕರ ಪೈಕಿ ಕೊನೆಯವನು ಸಾಕಷ್ಟು ಪ್ರತಿಫಲಕ್ಕಾಗಿ ಸದ್ಭಾವನೆಯಿಂದ ಕೂಡಿದ, ವರ್ಗಾವಣೆ ಪಡೆದವನಾಗಿದ್ದ ಅಥವಾ ಪಡೆದಿದ್ದವನು ಆಗಿದ್ದ ಹೊರತು, ಅಂಥ ಮುಂಚಿನ ಧಾರಕನು ಅದನ್ನು ಧಾರಣಮಾಡುವುದು ನಿಂತು ಹೋಗಿಲ್ಲದಿದ್ದರೆ ಅಂಥ ವ್ಯಕ್ತಿಯು ಧಾರಣ ಮಾಡಿದ್ದ, ಈ ಖಂಡದ ಮೇರೆಗೆ ಅದರ ಮುಂಚಿನ ಧಾರಕನಿಗೆ ಸಂಬಂಧಪಟ್ಟಂತೆ ಕಾನೂನು ಬಾಹಿರವಾಗಿ ಆರ್ಜಿಸಿದ ಸ್ವತ್ತಾಗಿರಬಹುದಾಗಿದ್ದಂಥ ಯಾವುದೇ ಸ್ವತ್ತು;

(B) ಅಂಥ ವ್ಯಕ್ತಿಯು, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯೇ ಆಗಲಿ ಅಥವಾ ಅದರ ತರುವಾಯವೇ ಆಗಲಿ, ಪ್ರತಿಫಲ ನೀಡಿ ಅಥವಾ (ಎ) ಬಾಬಿನ ಅಡಿಯಲ್ಲಿ ಬರುವ ಯಾವುದೇ ಸ್ವತ್ತಿನಿಂದ ಅಥವಾ ಅದರಿಂದ ಬಂದ ಆದಾಯ ಅಥವಾ ಗಳಿಕೆಗಳಿಂದ ಪೂರ್ಣವಾಗಿ ಅಥವಾ ಭಾಗಶಃ ಆರ್ಜಿಸಿದ ಅಥವಾ ಯಾವುದೇ ಸಾಧನಗಳ ಮೂಲಕ ಆರ್ಜಿಸಿದ ಯಾವುದೇ ಸ್ವತ್ತು

-ಇವುಗಳನ್ನು ಒಳಗೊಳ್ಳುತ್ತದೆ.

(ಡಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಇ) "ಸ್ವತ್ತು" ಎಂಬುದು, ಚರ ಅಥವಾ ಸ್ಥಿರ ಸ್ವತ್ತಿನಲ್ಲಿನ ಯಾವುದೇ ಹಿತಾಸಕ್ತಿಯನ್ನು ಒಳಗೊಳ್ಳುತ್ತದೆ;

(ಎಫ್) "ನ್ಯಾಸ" ಎಂಬುದು ಯಾವುದೇ ಇತರ ಕಾನೂನು ಬಾಧ್ಯತೆಯನ್ನು ಒಳಗೊಳ್ಳುತ್ತದೆ.

(2) ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿ ಇಲ್ಲದಿರುವಂಥ ಯಾವುದೇ ಕಾನೂನಿಗೆ ಈ ಅಧಿನಿಯಮದಲ್ಲಿ ಮಾಡಿರುವ ಯಾವುದೇ ಉಲ್ಲೇಖವನ್ನು, ಆ ಪ್ರದೇಶಕ್ಕೆ ಸಂಬಂಧಪಟ್ಟಂತೆ ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು, ಯಾವುದಾದರೂ ಇದ್ದರೆ, ಅದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕುದು.

(3) ಈ ಅಧಿನಿಯಮದಲ್ಲಿ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರಕ್ಕೆ ಮಾಡಿದ ಯಾವುದೇ ಉಲ್ಲೇಖವನ್ನು, ಅದೇ ಪದನಾಮದ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರವು ಇಲ್ಲದಿರುವಂಥ ಯಾವುದೇ ಪ್ರದೇಶಕ್ಕೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿ ಅಥವಾ ಪ್ರಾಧಿಕಾರಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕುದು.

**4. ಕಾನೂನು ಬಾಹಿರವಾಗಿ ಆರ್ಜಿಸಿದ ಸ್ವತ್ತನ್ನು ಧಾರಣ ಮಾಡುವುದರ ಬಗ್ಗೆ ನಿಷೇಧ.**- (1) ಈ ಅಧಿನಿಯಮವು ಪ್ರಾರಂಭವಾದಂದಿನಿಂದ, ಈ ಅಧಿನಿಯಮವು ಅನ್ವಯವಾಗುವ ಯಾವನೇ ವ್ಯಕ್ತಿಯು ತಾನೇ ಸ್ವತಃ ಅಥವಾ ತನ್ನ ಪರವಾಗಿ ಯಾವನೇ ಇತರ ವ್ಯಕ್ತಿಯ ಮೂಲಕ ಕಾನೂನು ಬಾಹಿರವಾಗಿ ಆರ್ಜಿಸಿದ ಯಾವುದೇ ಸ್ವತ್ತನ್ನು ಧಾರಣ ಮಾಡುವುದು ಕಾನೂನು ಸಮ್ಮತವಾಗಿರತಕ್ಕುದಲ್ಲ.

(2) ಯಾರೇ ವ್ಯಕ್ತಿಯು (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಕಾನೂನು ಬಾಹಿರವಾಗಿ ಆರ್ಜಿಸಿದ ಯಾವುದೇ ಸ್ವತ್ತನ್ನು ಧಾರಣ ಮಾಡಿರುವಲ್ಲಿ, ಅಂಥ ಸ್ವತ್ತು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಗುರಿಯಾಗತಕ್ಕುದು.

**5. ಸಕ್ಷಮ ಪ್ರಾಧಿಕಾರಿ.**- (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಈ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರಿಯ ಪ್ರಕಾರ್ಯಗಳನ್ನು ನೆರವೇರಿಸಲು ಅದು ಸೂಕ್ತವೆಂದು ಯೋಚಿಸುವಂಥ ಕೇಂದ್ರ ಸರ್ಕಾರದ ಹಲವಾರು ಅಧಿಕಾರಿಗಳನ್ನು (ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದವರು) ಅಧಿಕೃತಗೊಳಿಸಬಹುದು.

(2) ಸಕ್ಷಮ ಪ್ರಾಧಿಕಾರಿಗಳು, ಕೇಂದ್ರ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ವ್ಯಕ್ತಿಗಳು ಅಥವಾ ವ್ಯಕ್ತಿಗಳ ವರ್ಗಗಳಿಗೆ ಸಂಬಂಧಿಸಿದಂತೆ ತಮ್ಮ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**6. ಮುಟ್ಟುಗೋಲಿನ ಬಗ್ಗೆ ನೋಟೀಸು.**- (1) ಈ ಅಧಿನಿಯಮವು ಅನ್ವಯವಾಗುವ ಯಾರೇ ವ್ಯಕ್ತಿಯು ತಾನಾಗಿಯೇ ಆಗಲಿ ಅಥವಾ ತನ್ನ ಪರವಾಗಿ ಯಾವನೇ ಇತರ ವ್ಯಕ್ತಿಯ ಮೂಲಕವೇ ಆಗಲಿ ಧಾರಣ ಮಾಡಿರುವ ಸ್ವತ್ತುಗಳ ಮೌಲ್ಯವನ್ನು, 18ನೇ ಪ್ರಕರಣದ ಮೇರೆಗೆ ಕೈಗೊಂಡ ಕ್ರಮದ ಪರಿಣಾಮದಿಂದಾಗಿ ಅಥವಾ ಅನ್ಯಥಾ ಸಕ್ಷಮ ಪ್ರಾಧಿಕಾರಕ್ಕೆ ಲಭ್ಯವಾದ ಅವನ ಆದಾಯ, ಗಳಿಕೆಗಳು ಅಥವಾ ಆಸ್ತಿಗಳ ಗೊತ್ತಾದ ಮೂಲಗಳು, ಮತ್ತು ಯಾವುದೇ ಇತರ ಮಾಹಿತಿ ಅಥವಾ ಸಾಮಗ್ರಿಯನ್ನು ಗಮನದಲ್ಲಿಟ್ಟುಕೊಂಡು, ಅಂಥ ಎಲ್ಲಾ ಅಥವಾ ಯಾವುವೇ (ಸ್ವತ್ತುಗಳು) ಕಾನೂನು ಬಾಹಿರವಾಗಿ ಆರ್ಜಿಸಿದ ಸ್ವತ್ತುಗಳಾಗಿವೆಯೆಂದು ನಂಬಲು ಅದಕ್ಕೆ ಕಾರಣವಿದ್ದರೆ, (ಹಾಗೆ ನಂಬುವುದಕ್ಕಾಗಿನ ಕಾರಣಗಳನ್ನು ಬರಹದಲ್ಲಿ ದಾಖಲು ಮಾಡಬೇಕು) ಅಂಥ ವ್ಯಕ್ತಿಗೆ, (ಇಲ್ಲಿ ಇನ್ನು ಮುಂದೆ ಬಾಧಿತ ವ್ಯಕ್ತಿ ಎಂದು ಉಲ್ಲೇಖಿಸಲಾಗಿದೆ) ಸಾಮಾನ್ಯವಾಗಿ ಮೂವತ್ತು ದಿವಸಗಳಿಗಿಂತ ಕಡಿಮೆ ಇಲ್ಲದೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ, ಯಾವ ಆದಾಯ, ಗಳಿಕೆಗಳಿಂದ ಅಥವಾ ಯಾವ ಸಾಧನಗಳ ಮೂಲಕ ಅವನು ಅಂಥ ಸ್ವತ್ತನ್ನು ಆರ್ಜಿಸಿರುವನೋ ಆ ಆದಾಯ, ಗಳಿಕೆಗಳು ಅಥವಾ ಆಸ್ತಿಗಳ ಮೂಲಗಳನ್ನು, ಅವನು ಅವಲಂಬಿಸಿರುವಂಥ ಸಾಕ್ಷ್ಯ ಹಾಗೂ ಇತರ ಸಂಬಂಧಪಟ್ಟ ಮಾಹಿತಿ ಮತ್ತು

ವಿವರಗಳನ್ನು ತಿಳಿಸುವಂತೆ ಮತ್ತು ಸಂದರ್ಭಾನುಸಾರ ಎಲ್ಲಾ ಅಥವಾ ಯಾವುದೇ ಅಂಥ ಸ್ವತ್ತನ್ನು ಕಾನೂನು ಬಾಹಿರವಾಗಿ ಆರ್ಜಿಸಿದ ಸ್ವತ್ತುಗಳಾಗಿರುವುದಾಗಿ ಏಕೆ ಘೋಷಿಸಕೂಡದು ಮತ್ತು ಅವುಗಳನ್ನು ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಕೂಡದು ಎಂಬ ಬಗ್ಗೆ ಕಾರಣವನ್ನು ತೋರಿಸುವಂತೆ ಅವನನ್ನು ಕೋರುವ ನೋಟೀಸನ್ನು ಜಾರಿ ಮಾಡಬಹುದು.

(2) ಯಾವನೇ ವ್ಯಕ್ತಿಗೆ (1)ನೇ ಉಪಪ್ರಕರಣದ ಮೇರೆಗೆ ಕೊಟ್ಟ ನೋಟೀಸಿನಲ್ಲಿ ಯಾವುದೇ ಸ್ವತ್ತನ್ನು ಯಾವನೇ ಇತರೆ ವ್ಯಕ್ತಿಯು, ಅಂಥ ವ್ಯಕ್ತಿಯ ಪರವಾಗಿ ಧಾರಣ ಮಾಡಿರುವನೆಂದು ನಿರ್ದಿಷ್ಟಪಡಿಸಿರುವಲ್ಲಿ, ಆ ನೋಟೀಸಿನ ಪ್ರತಿಯನ್ನು ಅಂಥ ಇತರ ವ್ಯಕ್ತಿಗೂ ಸಹ ಜಾರಿ ಮಾಡತಕ್ಕುದು.

**7. ಕೆಲವು ಪ್ರಕರಣಗಳಲ್ಲಿ ಸ್ವತ್ತಿನ ಮುಟ್ಟುಗೋಲು.**- (1) 6ನೇ ಪ್ರಕರಣದ ಮೇರೆಗೆ ಕಾರಣವನ್ನು ತೋರಿಸಲು ಕೊಟ್ಟ ನೋಟೀಸಿಗೆ, ವಿವರಣೆ ಯಾವುದಾದರೂ ಇದ್ದರೆ ಅದನ್ನು ಮತ್ತು ತನ್ನ ಮುಂದೆ ಲಭ್ಯವಿರುವ ಸಾಮಗ್ರಿಗಳನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಬಾಧಿತ ವ್ಯಕ್ತಿಗೆ (ಮತ್ತು ಬಾಧಿತ ವ್ಯಕ್ತಿಯು ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಸ್ವತ್ತನ್ನು ಯಾವನೇ ಇತರ ವ್ಯಕ್ತಿಯ ಮೂಲಕ ಧಾರಣ ಮಾಡಿರುವ ಪ್ರಕರಣದಲ್ಲಿ ಅಂಥ ಇತರ ವ್ಯಕ್ತಿಗೂ ಸಹ) ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ, ಆದೇಶದ ಮೂಲಕ, ಪ್ರಶ್ನಿತವಾಗಿರುವ ಎಲ್ಲಾ ಅಥವಾ ಯಾವುದೇ ಸ್ವತ್ತನ್ನು ಕಾನೂನುಬಾಹಿರವಾಗಿ ಆರ್ಜಿಸಿದ ಸ್ವತ್ತುಗಳಾಗಿವೆಯೇ ಹೇಗೆ ಎಂಬ ಬಗ್ಗೆ ಸಕ್ಷಮ ಪ್ರಾಧಿಕಾರಿಯು ನಿರ್ಣಯವನ್ನು ದಾಖಲು ಮಾಡಬಹುದು.

(2) ಕಾರಣವನ್ನು ತೋರಿಸಲು ಕೊಟ್ಟ ನೋಟೀಸಿನಲ್ಲಿ, ಉಲ್ಲೇಖಿಸಿದ ಕೆಲವು ಸ್ವತ್ತುಗಳು ಕಾನೂನು ಬಾಹಿರವಾಗಿ ಆರ್ಜಿಸಿದ ಸ್ವತ್ತುಗಳು ಆಗಿವೆಯೆಂದು, ಆದರೆ ನಿರ್ದಿಷ್ಟವಾಗಿ ಅಂಥ ಸ್ವತ್ತುಗಳನ್ನು ಗುರುತಿಸಲು ಆಗುವುದಿಲ್ಲವೆಂದು ಸಕ್ಷಮ ಪ್ರಾಧಿಕಾರಿಗೆ ಮನದಟ್ಟಾದರೆ, ಆಗ ಸಕ್ಷಮ ಪ್ರಾಧಿಕಾರಿಯು ತನ್ನ ಅತ್ಯುತ್ತಮ ವಿವೇಚನೆಯಲ್ಲಿ ಯಾವ ಸ್ವತ್ತುಗಳು ಕಾನೂನುಬಾಹಿರವಾಗಿ ಆರ್ಜಿಸಿದ ಸ್ವತ್ತುಗಳಾಗಿವೆಯೋ ಆ ಸ್ವತ್ತುಗಳನ್ನು ನಿರ್ದಿಷ್ಟಪಡಿಸುವುದು ಮತ್ತು (1)ನೇ ಉಪಪ್ರಕರಣದ ಮೇರೆಗೆ ತದನುಸಾರವಾಗಿ ನಿರ್ಣಯವನ್ನು ದಾಖಲು ಮಾಡುವುದು ಅವನಿಗೆ ಕಾನೂನು ಸಮ್ಮತವಾಗಿರತಕ್ಕುದು.

(3) ಸಕ್ಷಮ ಪ್ರಾಧಿಕಾರಿಯು, ಯಾವುದೇ ಸ್ವತ್ತು ಕಾನೂನುಬಾಹಿರವಾಗಿ ಆರ್ಜಿಸಿದ ಸ್ವತ್ತಾಗಿದೆ ಎಂದು ಈ ಪ್ರಕರಣದ ಮೇರೆಗೆ ನಿರ್ಣಯವನ್ನು ದಾಖಲು ಮಾಡುವಲ್ಲಿ, ಅವನು ಅಂಥ ಸ್ವತ್ತು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಎಲ್ಲಾ ಪೂರ್ವಾಧಿಗಳಿಂದ ಮುಕ್ತವಾಗಿ ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲು ಆಗಿರುವುದಾಗಿ ಘೋಷಿಸತಕ್ಕುದು.

(4) ಒಂದು ಕಂಪನಿಯ ಯಾವುವೇ ಷೇರುಗಳನ್ನು, ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಲ್ಲಿ, ಆಗ ಆ ಕಂಪನಿಯು ಕಂಪನಿಗಳ ಅಧಿನಿಯಮ, 1956 (1956ರ1) ಅಥವಾ ಆ ಕಂಪನಿಯ ಸಂಘದ ನಿಯಮಾವಳಿಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ತಕ್ಷಣ ಕೇಂದ್ರ ಸರ್ಕಾರವು ಅಂಥ ಷೇರುಗಳ ವರ್ಗಾವಣೆ ಪಡೆದಿದೆಯೆಂದು ನೋಂದಾಯಿಸತಕ್ಕುದು.

**8. ರುಜುವಾತಿನ ಭಾರ.**- ಈ ಅಧಿನಿಯಮದ ಮೇರೆಗಿನ ಯಾವುವೇ ವ್ಯವಹರಣೆಗಳಲ್ಲಿ, 6ನೇ ಪ್ರಕರಣದ ಮೇರೆಗೆ ಜಾರಿಗೊಳಿಸಿದ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಸ್ವತ್ತು, ಕಾನೂನುಬಾಹಿರವಾಗಿ ಆರ್ಜಿಸಿದ ಸ್ವತ್ತಾಗಿಲ್ಲವೆಂದು ರುಜುವಾತುಪಡಿಸುವ ಭಾರವು, ಬಾಧಿತ ವ್ಯಕ್ತಿಯ ಮೇಲಿರತಕ್ಕುದು.

**9. ಮುಟ್ಟುಗೋಲಿನ ಬದಲಾಗಿ ಜುಲ್ಮಾನೆ.**- (1) ಸಕ್ಷಮ ಪ್ರಾಧಿಕಾರಿಯು, ಯಾವುದೇ ಸ್ವತ್ತು 7ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲಾಗಿದೆ ಎಂದು ಘೋಷಿಸಿರುವಲ್ಲಿ ಮತ್ತು ಅಂಥ ಸ್ವತ್ತನ್ನು ಯಾವ ಆದಾಯದ, ಗಳಿಕೆಗಳ ಅಥವಾ ಆಸ್ತಿಗಳ ಅರ್ಧಕ್ಕಿಂತ ಕಡಿಮೆಯಾಗಿರುವ ಒಂದು ಭಾಗದ ಮೂಲದಿಂದ ಆರ್ಜನೆ ಮಾಡಲಾಗಿದ್ದು ಆ ಭಾಗದ ಮೂಲವನ್ನು ಸಕ್ಷಮ ಪ್ರಾಧಿಕಾರಿಗೆ ಮನದಟ್ಟಾಗುವಂತೆ ರುಜವಾತುಪಡಿಸದೆ ಇರುವ ಪ್ರಕರಣವಾಗಿರುವಲ್ಲಿ, ಸಕ್ಷಮ ಪ್ರಾಧಿಕಾರಿಯು ಮುಟ್ಟುಗೋಲಿಗೆ ಬದಲಾಗಿ

ಅಂಥ ಮೌಲ್ಯದ ಒಂದು ಮತ್ತು ಐದನೇ ಒಂದು ಭಾಗಕ್ಕೆ ಸಮನಾದ ಜುಲ್ಮಾನೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ಮಾಡಿಕೊಳ್ಳುವ ಆದೇಶವನ್ನು ಮಾಡಬಹುದು. ಸಮನಾದ ಜುಲ್ಮಾನೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ಕೊಡುವ ಆದೇಶವನ್ನು ಮಾಡತಕ್ಕುದು.

**ವಿವರಣೆ:-** ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಯಾವ ಆದಾಯ ಗಳಿಕೆಗಳಿಂದ ಯಾವುದೇ ಸ್ವತ್ತನ್ನು ಆರ್ಜಿಸಲಾಗಿದೆಯೋ ಆ ಆದಾಯ, ಗಳಿಕೆಗಳು ಅಥವಾ ಆಸ್ತಿಗಳ ಯಾವುದೇ ಭಾಗದ ಮೌಲ್ಯವು,-

(ಎ) ಆದಾಯ ಅಥವಾ ಗಳಿಕೆಗಳ ಯಾವುದೇ ಭಾಗದ ಪ್ರಕರಣದಲ್ಲಿ, ಆದಾಯ ಅಥವಾ ಗಳಿಕೆಗಳ ಅಂಥ ಭಾಗದ ಮೊಬಲಗು ಆಗಿರತಕ್ಕುದು;

(ಬಿ) ಆಸ್ತಿಗಳ ಯಾವುದೇ ಭಾಗದ ಪ್ರಕರಣದಲ್ಲಿ, ಅಂಥ ಆಸ್ತಿಗಳ ಆರ್ಜನೆಯ ಪ್ರತಿಫಲದ ಪೂರ್ಣ ಮೌಲ್ಯದ ಪ್ರಮಾಣಾನುಸಾರ ಭಾಗವಾಗಿರತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಜುಲ್ಮಾನೆಯನ್ನು ವಿಧಿಸುವ ಆದೇಶವನ್ನು ಮಾಡುವುದಕ್ಕೆ ಮುಂಚೆ, ಬಾಧಿತ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳುವ ಯುಕ್ತ ಅವಕಾಶವನ್ನು ಕೊಡತಕ್ಕುದು.

(3) ಬಾಧಿತ ಆ ವ್ಯಕ್ತಿಯು (1)ನೇ ಉಪಪ್ರಕರಣದ ಮೇರೆಗೆ ಬಾಕಿಯಾದ ಜುಲ್ಮಾನೆಯನ್ನು ಈ ಬಗ್ಗೆ ಅನುಮತಿಸಬಹುದಾದಂಥ ಕಾಲದೊಳಗೆ ಸಂದಾಯ ಮಾಡಿದರೆ, ಆ ಸಕ್ಷಮ ಪ್ರಾಧಿಕಾರಿಯು ಆದೇಶದ ಮೂಲಕ 7ನೇ ಪ್ರಕರಣದ ಮೇರೆಗೆ ಮಾಡಿದ ಮುಟ್ಟುಗೋಲಿನ ಘೋಷಣೆಯನ್ನು ರದ್ದುಪಡಿಸಬಹುದು ಮತ್ತು ಆ ತರುವಾಯ ಅಂಥ ಸ್ವತ್ತು ಬಿಡುಗಡೆ ಹೊಂದತಕ್ಕುದು.

**10. ಕೆಲವು ನ್ಯಾಸದ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಪ್ರಕ್ರಿಯೆ.-** 2ನೇ ಪ್ರಕರಣದ (2) ನೇ ಉಪಪ್ರಕರಣದ 3ನೇ ವಿವರಣೆಯ (ಇ) ನೇ ಖಂಡದಲ್ಲಿ ಉಲ್ಲೇಖಿಸಲಾದ ಯಾವನೇ ವ್ಯಕ್ತಿಯ ಪ್ರಕರಣದಲ್ಲಿ, ಸಕ್ಷಮ ಪ್ರಾಧಿಕಾರಿಯು ತನಗೆ ಲಭ್ಯವಿರುವ ಮಾಹಿತಿ ಮತ್ತು ಸಾಮಗ್ರಿಗಳ ಆಧಾರದ ಮೇಲೆ, ನ್ಯಾಸದಲ್ಲಿ ಧಾರಣ ಮಾಡಿದ ಯಾವುದೇ ಸ್ವತ್ತು, ಕಾನೂನು ಬಾಹಿರವಾಗಿ ಆರ್ಜಿಸಲಾದ ಸ್ವತ್ತಾಗಿದೆ ಎಂದು ನಂಬಲು ಕಾರಣವನ್ನು ಹೊಂದಿದ್ದರೆ (ಹಾಗೆ ನಂಬಲು ಇರುವ ಕಾರಣಗಳನ್ನು ಬರಹದಲ್ಲಿ ದಾಖಲು ಮಾಡಬೇಕು) ಅವನು ಯಾವ ನ್ಯಾಸದಿಂದ ಅಥವಾ ನ್ಯಾಸದ ಮೂಲಕ ಅಂಥ ಸ್ವತ್ತನ್ನು ಆರ್ಜಿಸಲಾಗಿದ್ದಿತೋ ಆ ನ್ಯಾಸದ ಕರ್ತ ಅಥವಾ ಸಂದರ್ಭಾನುಸಾರ ಆ ಆಸ್ತಿಗಳ ವಂತಿಗೆದಾರ ಮತ್ತು ನ್ಯಾಸಧಾರಿಗಳಿಗೆ, ಸಾಮಾನ್ಯವಾಗಿ ಮೂವತ್ತು ದಿವಸಗಳಿಗಿಂತ ಕಡಿಮೆಯಿಲ್ಲದಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ಕಾಲದೊಳಗೆ ಯಾವ ಹಣ ಅಥವಾ ಆಸ್ತಿಗಳಿಂದ ಅಥವಾ ಅವುಗಳ ಮೂಲಕ ಅಂಥ ಸ್ವತ್ತನ್ನು ಆರ್ಜಿಸಲಾಗಿದ್ದಿತೋ ಆ ಹಣ ಅಥವಾ ಇತರ ಆಸ್ತಿಗಳ ಮೂಲವನ್ನು ಅಥವಾ ಸಂದರ್ಭಾನುಸಾರ ಅಂಥ ಸ್ವತ್ತನ್ನು ಆರ್ಜಿಸುವುದಕ್ಕಾಗಿ ಆ ನ್ಯಾಸಕ್ಕೆ ವಂತಿಕೆ ಕೊಟ್ಟಿದ್ದಂಥ ಹಣ ಅಥವಾ ಇತರ ಆಸ್ತಿಗಳ ಮೂಲವನ್ನು ಅವರು ವಿವರಿಸಬೇಕೆಂದು ಕೋರಿ ನೋಟೀಸನ್ನು ಜಾರಿ ಮಾಡಬಹುದು ಮತ್ತು ಆ ತರುವಾಯ ಅಂಥ ನೋಟೀಸನ್ನು 6ನೇ ಪ್ರಕರಣದ ಮೇರೆಗೆ ಜಾರಿಗೊಳಿಸಿದ ನೋಟೀಸಾಗಿರುವುದಾಗಿ ಭಾವಿಸತಕ್ಕುದು ಮತ್ತು ತದನುಸಾರವಾಗಿ ಈ ಅಧಿನಿಯಮದ ಎಲ್ಲಾ ಇತರ ಉಪಬಂಧಗಳು ಅನ್ವಯವಾಗತಕ್ಕುದು.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ, ನ್ಯಾಸದಲ್ಲಿ ಧಾರಣ ಮಾಡಿದ ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ "ಕಾನೂನುಬಾಹಿರವಾಗಿ ಆರ್ಜಿಸಲಾದ ಸ್ವತ್ತು" ಎಂಬುದು,-

(i) ಯಾವುದನ್ನು ನ್ಯಾಸದ ಕರ್ತನು ಅಥವಾ ನ್ಯಾಸಕ್ಕೆ ಅಂಥ ಸ್ವತ್ತನ್ನು ಕೊಟ್ಟ ವಂತಿಗೆದಾರನು ಅದನ್ನು ಧಾರಣ ಮಾಡುವುದು ಮುಂದುವರೆದಿದ್ದರೆ, ಅದು ಅಂಥ ಕರ್ತ ಅಥವಾ ವಂತಿಗೆದಾರನಿಗೆ ಸಂಬಂಧಪಟ್ಟಂತೆ ಕಾನೂನು ಬಾಹಿರವಾಗಿ ಆರ್ಜಿಸಿದ ಸ್ವತ್ತು ಆಗುತ್ತಿದ್ದಿತೋ ಆ ಯಾವುದೇ ಸ್ವತ್ತು;

(ii) ಅಂಥ ವ್ಯಕ್ತಿಯು ಅಂಥ ಸ್ವತ್ತನ್ನು ಅಂಥ ವಂತಿಗೆಗಳಿಂದ ಆರ್ಜಿಸಿದ್ದಿದ್ದರೆ ಯಾವುದು ಅಂಥ ವ್ಯಕ್ತಿಗೆ ಸಂಬಂಧಪಟ್ಟಂತೆ ಕಾನೂನು ಬಾಹಿರವಾಗಿ ಆರ್ಜಿಸಲಾದ ಸ್ವತ್ತು ಆಗುತ್ತಿದ್ದಿತೋ, ಆ

ಯಾವನೇ ವ್ಯಕ್ತಿಯು ಕೊಟ್ಟ ಯಾವುವೇ ವಂತಿಗೆಗಳಿಂದ ಆ ನ್ಯಾಸವು ಆರ್ಜಿಸಿದ ಯಾವುದೇ ಸ್ವತ್ತು

–ಇವುಗಳನ್ನು ಒಳಗೊಳ್ಳುತ್ತದೆ.

11. **ಕೆಲವು ವರ್ಗಾವಣೆಗಳು ಅಕೃತ ಮತ್ತು ಶೂನ್ಯವಾಗದಿರುವುದು.**– 6ನೇ ಪ್ರಕರಣದ ಮೇರೆಗೆ ಅಥವಾ 10ನೇ ಪ್ರಕರಣದ ಮೇರೆಗೆ ನೋಟೀಸನ್ನು ಕೊಟ್ಟ ತರುವಾಯ ಸದರಿ ನೋಟೀಸಿನಲ್ಲಿ ಉಲ್ಲೇಖಿಸಿರುವ ಯಾವುದೇ ಸ್ವತ್ತನ್ನು ಯಾವುದೇ ರೀತಿಯಲ್ಲಾದರೂ ವರ್ಗಾವಣೆ ಮಾಡಿರುವಲ್ಲಿ ಅಂಥ ವರ್ಗಾವಣೆಯನ್ನು ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳ ಉದ್ದೇಶಗಳಿಗಾಗಿ ಉಪೇಕ್ಷಿಸತಕ್ಕುದು ಮತ್ತು ಅಂಥ ಸ್ವತ್ತನ್ನು 7ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರಕ್ಕೆ ತರುವಾಯದಲ್ಲಿ ಮುಟ್ಟುಗೋಲು ಹಾಕಿಕೊಂಡರೆ, ಆಗ ಅಂಥ ಸ್ವತ್ತಿನ ವರ್ಗಾವಣೆಯು ಅಕೃತ ಮತ್ತು ಶೂನ್ಯವಾಗಿರುವುದಾಗಿ ಭಾವಿಸತಕ್ಕುದು.

12. **ಅಪೀಲು ನ್ಯಾಯಾಧಿಕರಣದ ರಚನೆ.**– (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ತಾನು ಸೂಕ್ತವೆಂದು ಯೋಚಿಸಬಹುದಾದಂತೆ, 7ನೇ ಪ್ರಕರಣ, 9ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ 10ನೇ ಪ್ರಕರಣದ ಮೇರೆಗೆ ಮಾಡಿದ ಆದೇಶಗಳ ವಿರುದ್ಧ ಅಪೀಲುಗಳನ್ನು ಸುನಾವಣೆ ಮಾಡುವುದಕ್ಕಾಗಿ ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ, ಕೇಂದ್ರ ಸರ್ಕಾರವು ಸೂಕ್ತವೆಂದು ಯೋಚಿಸುವಂಥ ಅಧ್ಯಕ್ಷ ಮತ್ತು ಅಂಥ ಸಂಖ್ಯೆಯ ಇತರ ಸದಸ್ಯರನ್ನು (ಆ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆ ಇಲ್ಲದ ಕೇಂದ್ರ ಸರ್ಕಾರದ ಅಧಿಕಾರಿಗಳಾಗಿರುವ) ಒಳಗೊಂಡು ಮುಟ್ಟುಗೋಲು ಹಾಕಿಕೊಂಡ ಸ್ವತ್ತಿನ ಅಪೀಲು ನ್ಯಾಯಾಧಿಕರಣ ಎಂದು ಕರೆಯಲಾಗುವ ಅಪೀಲು ನ್ಯಾಯಾಧಿಕರಣವನ್ನು ರಚಿಸಬಹುದು.

(2) ಆ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು, ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಅಥವಾ ಆಗಲು ಅರ್ಹನಾಗಿರುವ ವ್ಯಕ್ತಿಯಾಗಿರತಕ್ಕುದು.

(3) ಅಧ್ಯಕ್ಷ ಮತ್ತು ಇತರ ಸದಸ್ಯರುಗಳ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ನಿಯಮಿಸಬಹುದಾದಂಥವು ಆಗಿರತಕ್ಕುದು.

(4) 7ನೇ ಪ್ರಕರಣ, 9ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ 10ನೇ ಪ್ರಕರಣದ ಮೇರೆಗೆ ಮಾಡಿದ ಸಕ್ಷಮ ಪ್ರಾಧಿಕಾರಿಯ ಆದೇಶದ ಮೂಲಕ ಬಾಧಿತನಾದ ಯಾರೇ ವ್ಯಕ್ತಿಯು, ಅವನಿಗೆ ಆದೇಶವನ್ನು ಜಾರಿ ಮಾಡಿದಂಥ ದಿನಾಂಕದಿಂದ ನಲವತ್ತೈದು ದಿವಸಗಳೊಳಗೆ, ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಆ ಅಪೀಲುದಾರನು ಅಪೀಲನ್ನು ಸಕಾಲದಲ್ಲಿ ದಾಖಲು ಮಾಡಲು ಸಾಕಷ್ಟು ಕಾರಣದಿಂದ ಪ್ರತಿಬಂಧಿತನಾಗಿದ್ದನೆಂದು ಅಪೀಲು ನ್ಯಾಯಾಧಿಕರಣಕ್ಕೆ ಮನದಟ್ಟಾದರೆ, ಅದು ನಲವತ್ತೈದು ದಿವಸಗಳ ಸದರಿ ಅವಧಿಯ ತರುವಾಯ, ಆದರೆ ಹಿಂದೆ ಹೇಳಿದ ದಿನಾಂಕದಿಂದ ಅರವತ್ತು ದಿವಸಗಳ ತರುವಾಯವಲ್ಲದೆ ಯಾವುದೇ ಅಪೀಲನ್ನು ಪುರಸ್ಕರಿಸಬಹುದು.

(5) (4)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಸ್ವೀಕರಿಸಿದ ಮೇಲೆ ಆ ಅಪೀಲು ನ್ಯಾಯಾಧಿಕರಣವು ಅಹವಾಲನ್ನು ಹೇಳಿಕೊಳ್ಳಲು ಅಪೀಲುದಾರನಿಗೆ ಒಂದು ಅವಕಾಶವನ್ನು ಕೊಟ್ಟ ತರುವಾಯ, ಅವನು ಹಾಗೆ ಇಚ್ಛಿಸಿದರೆ, ಮತ್ತು ಅದು ಸೂಕ್ತವೆಂದು ಭಾವಿಸುವಂಥ ಇನ್ನೂ ಹೆಚ್ಚಿನ ವಿಚಾರಣೆಯನ್ನು ಮಾಡಿದ ತರುವಾಯ ಯಾವ ಆದೇಶದ ವಿರುದ್ಧ ಅಪೀಲನ್ನು ಮಾಡಿಕೊಳ್ಳಲಾಗಿದೆಯೋ ಆ ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಡು ಮಾಡಬಹುದು ಅಥವಾ ರದ್ದುಗೊಳಿಸಬಹುದು.

(6) ಅಪೀಲು ನ್ಯಾಯಾಧಿಕರಣದ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು, ಮೂವರು ಸದಸ್ಯರನ್ನು ಒಳಗೊಂಡ ಮತ್ತು ಆ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು ರಚಿಸಿದ ನ್ಯಾಯ ಪೀಠಗಳು ಚಲಾಯಿಸಬಹುದು ಮತ್ತು ನಿರ್ವಹಿಸಬಹುದು.

(6ಎ) (6)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ಅಪೀಲುಗಳ ತ್ವರಿತ ವಿಲೆಗಾಗಿ ಹಾಗೆ ಮಾಡುವುದು ಅವಶ್ಯವೆಂದು ಅಧ್ಯಕ್ಷನು ಪರ್ಯಾಲೋಚಿಸಿದರೆ, ಅವನು ಇಬ್ಬರು ಸದಸ್ಯರ ನ್ಯಾಯ ಪೀಠವನ್ನು ರಚಿಸಬಹುದು ಮತ್ತು ಹಾಗೆ ರಚಿಸಿದ ನ್ಯಾಯ ಪೀಠವು ಆ ಅಪೀಲು ನ್ಯಾಯಾಧಿಕರಣದ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಬಹುದು:

ಪರಂತು, ಹಾಗೆ ರಚಿಸಿದ ನ್ಯಾಯಪೀಠದ ಸದಸ್ಯರು, ಯಾವುದೇ ಅಂಶ ಅಥವಾ ಅಂಶಗಳ ಬಗ್ಗೆ ಭಿನ್ನಾಭಿಪ್ರಾಯವನ್ನು ಹೊಂದಿದ್ದರೆ ಯಾವ ಅಂಶ ಅಥವಾ ಅಂಶಗಳ ಬಗ್ಗೆ ಭಿನ್ನಾಭಿಪ್ರಾಯವನ್ನು ಹೊಂದಿರುವರೋ ಆ ಅಂಶ ಮತ್ತು ಅಂಶಗಳನ್ನು ನಿರೂಪಿಸತಕ್ಕದು. ಮತ್ತು ಅಂಥ ಅಂಶ ಅಥವಾ ಅಂಶಗಳ ಬಗ್ಗೆ ಸುನಾವಣೆಗಾಗಿ ಮೂರನೇ ಸದಸ್ಯನಿಗೆ (ಅಧ್ಯಕ್ಷನು ನಿರ್ದಿಷ್ಟಪಡಿಸಬೇಕಾದ) ಅದನ್ನು ಒಪ್ಪಿಸತಕ್ಕದು ಮತ್ತು ಅಂಥ ಅಂಶ ಅಥವಾ ಅಂಶಗಳನ್ನು ಆ ಸದಸ್ಯನ ಅಭಿಪ್ರಾಯಕ್ಕನುಸಾರವಾಗಿ ತೀರ್ಮಾನಿಸತಕ್ಕದು.

(7) ಆ ಅಪೀಲು ನ್ಯಾಯಾಧಿಕರಣವು ತನ್ನದೇ ಆದ ಪ್ರಕ್ರಿಯೆಯನ್ನು ವಿನಿಯಮಿಸಬಹುದು.

(8) ಅಪೀಲು ನ್ಯಾಯಾಧಿಕರಣಕ್ಕೆ ಅರ್ಜಿಯನ್ನು ಮಾಡಿಕೊಂಡ ಮೇಲೆ ಮತ್ತು ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ ಆ ನ್ಯಾಯಾಧಿಕರಣವು, ಯಾವುದೇ ಅಪೀಲಿನಲ್ಲಿನ ಪಕ್ಷಕಾರನು ಅಥವಾ ಅಂಥ ಪಕ್ಷಕಾರನು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಕಛೇರಿ ವೇಳೆಗಳಲ್ಲಿ ಯಾವುದೇ ಕಾಲದಲ್ಲಿ ಆ ನ್ಯಾಯಾಧಿಕರಣದ ಸಂಬಂಧಪಟ್ಟ ಯಾವುದೇ ದಾಖಲೆಗಳು ಮತ್ತು ರಿಜಿಸ್ಟರುಗಳನ್ನು ಪರಿಶೀಲಿಸಲು ಮತ್ತು ಆ ದಾಖಲೆಯ ಯಾವುದೇ ಭಾಗದ ಪ್ರಮಾಣೀಕರಿಸಿದ ಪ್ರತಿಯನ್ನು ಪಡೆಯಲು ಅವನಿಗೆ ಅವಕಾಶ ಮಾಡಿಕೊಡಬಹುದು.

**13. ನೋಟೀಸು ಅಥವಾ ಆದೇಶವು ವಿವರಣೆಯಲ್ಲಿನ ತಪ್ಪಿಗಾಗಿ ಅಸಿಂಧುವಾಗದಿರುವುದು.**- ಈ ಅಧಿನಿಯಮದ ಮೇರೆಗೆ ಹೊರಡಿಸಿದ ಅಥವಾ ಜಾರಿಗೊಳಿಸಿದ ಯಾವುದೇ ನೋಟೀಸು, ಮಾಡಿದ ಯಾವುದೇ ಘೋಷಣೆ, ಮತ್ತು ಹೊರಡಿಸಿದ ಯಾವುದೇ ಆದೇಶವು ಅದರಲ್ಲಿ ನಮೂದು ಮಾಡಿದ ಸ್ವತ್ತಿನ ಅಥವಾ ವ್ಯಕ್ತಿಯ ವಿವರಣೆಯಲ್ಲಿನ ಯಾವುದೇ ತಪ್ಪಿನ ಕಾರಣದಿಂದಾಗಿ, ಹಾಗೆ ನಮೂದು ಮಾಡಿದ ವಿವರಣೆಯಿಂದ ಅಂಥ ಸ್ವತ್ತು ಅಥವಾ ವ್ಯಕ್ತಿಯನ್ನು ಗುರುತಿಸಬಹುದಾದರೆ, ಅಸಿಂಧುವಾಗಿರುವುದಾಗಿ ಭಾವಿಸತಕ್ಕದಲ್ಲ.

**14. ಅಧಿಕಾರ ವ್ಯಾಪ್ತಿಯ ಬಗ್ಗೆ ಪ್ರತಿಷೇಧ.**- ಈ ಅಧಿನಿಯಮದ ಮೇರೆಗೆ ಹೊರಡಿಸಿದ ಯಾವುದೇ ಆದೇಶ ಅಥವಾ ಮಾಡಿದ ಘೋಷಣೆಯು, ಅದರಲ್ಲಿ ಉಪಬಂಧಿಸಿದಂತೆ ಹೊರತು ಅಪೀಲೀಯವಾಗಿರತಕ್ಕದಲ್ಲ ಮತ್ತು ಯಾವುದೇ ಸಿವಿಲ್ ನ್ಯಾಯಾಲಯವು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಪೀಲು ನ್ಯಾಯಾಧಿಕರಣ ಅಥವಾ ಯಾವುದೇ ಸಕ್ಷಮ ಪ್ರಾಧಿಕಾರಿಯು ನಿರ್ಧರಿಸಲು ಶಕ್ತಗೊಂಡಿರುವಂಥ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದಾನ ಮಾಡಿದ ಯಾವುದೇ ಅಧಿಕಾರಕ್ಕನುಸಾರ ಕೈಗೊಂಡ ಅಥವಾ ಕೈಗೊಳ್ಳಬೇಕಾದ ಯಾವುದೇ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು ಯಾವುದೇ ನಿರ್ಬಂಧಕಾಜ್ಞೆಯನ್ನು ಕೊಡತಕ್ಕದಲ್ಲ.

**15. ಸಕ್ಷಮ ಪ್ರಾಧಿಕಾರಿ ಮತ್ತು ಅಪೀಲು ನ್ಯಾಯಾಧಿಕರಣವು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರುವುದು.**- ಸಕ್ಷಮ ಪ್ರಾಧಿಕಾರಿ ಮತ್ತು ಅಪೀಲು ನ್ಯಾಯಾಧಿಕರಣವು ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908 ರ 5) ಮೇರೆಗೆ ದಾವೆಯನ್ನು ಅಧಿವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದು, ಎಂದರೆ:-

(ಎ) ಯಾರೇ ವ್ಯಕ್ತಿಯನ್ನು ಸಮನುಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಅವನನ್ನು ಪ್ರಮಾಣ ವಚನದ ಮೇಲೆ ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಕಂಡುಹಿಡಿಯುವುದು ಮತ್ತು ಅವುಗಳ ಹಾಜರುಪಡಿಸುವಿಕೆಯನ್ನು ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್ ಗೈ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿಗಳು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಕಮೀಷನ್‌ಗಳನ್ನು ಹೊರಡಿಸುವುದು;

(ಎಫ್) ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

**16. ಸಕ್ಷಮ ಪ್ರಾಧಿಕಾರಿಗೆ ಮಾಹಿತಿ.–** (1) ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಕ್ಷಮ ಪ್ರಾಧಿಕಾರಿಯ ಅಭಿಪ್ರಾಯದಲ್ಲಿ ಈ ಅಧಿನಿಯಮದ ಉದ್ದೇಶಗಳಿಗೆ ಉಪಯುಕ್ತವಾಗುವ ಅಥವಾ ಅದಕ್ಕೆ ಸಂಬಂಧಪಡುವಂಥ ವ್ಯಕ್ತಿಗಳು, ಅಂಶಗಳು ಅಥವಾ ವಿಷಯಗಳಿಗೆ ಸಂಬಂಧಪಟ್ಟಂತೆ, ಮಾಹಿತಿಯನ್ನು ಒದಗಿಸಲು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾವನೇ ಅಧಿಕಾರಿಯನ್ನು ಅಥವಾ ಪ್ರಾಧಿಕಾರವನ್ನು ಅಥವಾ ಸ್ಥಳೀಯ ಪ್ರಾಧಿಕಾರವನ್ನು ಅಗತ್ಯಪಡಿಸುವ ಅಧಿಕಾರವನ್ನು ಆ ಸಕ್ಷಮ ಪ್ರಾಧಿಕಾರಿಯು ಹೊಂದಿರತಕ್ಕುದು.

(2) ಆದಾಯ ತೆರಿಗೆ ಇಲಾಖೆ, ಸೀಮಾಸುಂಕ ಇಲಾಖೆ ಅಥವಾ ಕೇಂದ್ರ ಉತ್ಪಾದನಾ ಸುಂಕ ಇಲಾಖೆಯ ಯಾವನೇ ಅಧಿಕಾರಿಯು ಅಥವಾ ವಿದೇಶೀ ವಿನಿಮಯ ನಿಯಂತ್ರಣ ಅಧಿನಿಯಮ, 1973 (1973ರ 46) ರ ಮೇರೆಗೆ ನೇಮಕಗೊಂಡ ಯಾವನೇ ಜಾರಿಗೊಳಿಸುವ ಅಧಿಕಾರಿಯು, ತನ್ನ ಬಳಿ ಲಭ್ಯವಿರುವಂಥ ಯಾವುದೇ ಮಾಹಿತಿಯು ಅವನ ಅಭಿಪ್ರಾಯದಲ್ಲಿ ಈ ಅಧಿನಿಯಮದ ಉದ್ದೇಶಗಳಿಗಾಗಿ ಸಕ್ಷಮ ಪ್ರಾಧಿಕಾರಿಗೆ ಉಪಯುಕ್ತವಾಗುವ ಹಾಗಿದ್ದರೆ ತಾನಾಗಿಯೇ ಅದನ್ನು ಆ ಸಕ್ಷಮ ಪ್ರಾಧಿಕಾರಿಗೆ ಒದಗಿಸಬಹುದು.

**17. ಕೆಲವು ಅಧಿಕಾರಿಗಳು ಸಕ್ಷಮ ಪ್ರಾಧಿಕಾರಿ ಮತ್ತು ಅಪೀಲು ನ್ಯಾಯಾಧಿಕರಣಕ್ಕೆ ಸಹಾಯ ಮಾಡುವುದು.–** ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಗಳ ಉದ್ದೇಶಗಳಿಗಾಗಿ, ಈ ಕೆಳಕಂಡ ಅಧಿಕಾರಿಗಳನ್ನು, ಸಕ್ಷಮ ಪ್ರಾಧಿಕಾರಿ ಮತ್ತು ಅಪೀಲು ನ್ಯಾಯಾಧಿಕರಣಕ್ಕೆ ಸಹಾಯ ಮಾಡಲು ಈ ಮೂಲಕ ಶಕ್ತಗೊಳಿಸಲಾಗಿದೆ ಮತ್ತು ಹಾಗೆ ಸಹಾಯ ಮಾಡುವಂತೆ ಅಗತ್ಯಪಡಿಸಲಾಗಿದೆ, ಅವರೆಂದರೆ:–

(ಎ) ಸೀಮಾಸುಂಕ ಇಲಾಖೆಯ ಅಧಿಕಾರಿಗಳು;

(ಬಿ) ಕೇಂದ್ರ ಉತ್ಪಾದನಾ ಸುಂಕ ಇಲಾಖೆಯ ಅಧಿಕಾರಿಗಳು;

(ಸಿ) ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು;

(ಡಿ) ವಿದೇಶೀ ವಿನಿಮಯ ನಿಯಂತ್ರಣ ಅಧಿನಿಯಮ, 1973ರ (1973ರ 46) ಮೇರೆಗೆ ನೇಮಕಗೊಂಡ ಜಾರಿಗೊಳಿಸುವ ಅಧಿಕಾರಿಗಳು;

(ಇ) ಪೊಲೀಸು ಅಧಿಕಾರಿಗಳು;

(ಎಫ್) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಕೇಂದ್ರ ಅಥವಾ ರಾಜ್ಯ ಸರ್ಕಾರದ ಇತರ ಅಧಿಕಾರಿಗಳು.

**18. ಕೆಲವು ಅಧಿಕಾರಗಳನ್ನು ಚಲಾಯಿಸಲು ಕೆಲವು ಅಧಿಕಾರಿಗಳನ್ನು ಅಗತ್ಯಪಡಿಸಲು ಸಕ್ಷಮ ಪ್ರಾಧಿಕಾರಿಯ ಅಧಿಕಾರ.–** (1) ಈ ಅಧಿನಿಯಮದ ಮೇರೆಗಿನ ಯಾವುವೇ ವ್ಯವಹರಣೆಗಳ ಅಥವಾ

ಯಾವುವೇ ಅಂಥ ವ್ಯವಹರಣೆಗಳನ್ನು ಪ್ರಾರಂಭಿಸುವ ಉದ್ದೇಶಗಳಿಗಾಗಿ, ಸಕ್ಷಮ ಪ್ರಾಧಿಕಾರಿಯು, ಯಾರೇ ವ್ಯಕ್ತಿ, ಯಾವುದೇ ಸ್ಥಳ, ಸ್ವತ್ತು, ಆಸ್ತಿಗಳು, ದಸ್ತಾವೇಜುಗಳು, ಲೆಕ್ಕದ ಪುಸ್ತಕಗಳು ಅಥವಾ ಯಾವುದೇ ಇತರ ಸಂಬಂಧಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ, ಯಾವುದೇ ವಿಚಾರಣೆ, ತನಿಖೆ ಅಥವಾ ಸಮೀಕ್ಷೆಯನ್ನು ನಡೆಸುವಂತೆ ಮಾಡಲು ಅಧಿಕಾರವನ್ನು ಹೊಂದಿರತಕ್ಕುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಉದ್ದೇಶಗಳಿಗಾಗಿ, ಸಕ್ಷಮ ಪ್ರಾಧಿಕಾರಿಯು ಆ ವಿಚಾರಣೆ, ತನಿಖೆ ಅಥವಾ ಸಮೀಕ್ಷೆಯ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು, ಆದಾಯ ತೆರಿಗೆ ಇಲಾಖೆಯ ಅಧಿಕಾರಿಯನ್ನು ಅಂಥ ವಿಚಾರಣೆ, ತನಿಖೆ ಅಥವಾ ಸಮೀಕ್ಷೆಯನ್ನು ನಡೆಸಲು ಅಥವಾ ನಡೆಸುವಂತೆ ಮಾಡಲು ಅಗತ್ಯಪಡಿಸಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ನಡೆಸಲು ಅಗತ್ಯಪಡಿಸಿದ ಯಾವುದೇ ವಿಚಾರಣೆ, ತನಿಖೆ ಅಥವಾ ಸಮೀಕ್ಷೆಯನ್ನು ನಡೆಸುತ್ತಿರುವ ಅಥವಾ ನಡೆಯುವಂತೆ ಮಾಡುತ್ತಿರುವ ಆದಾಯ ತೆರಿಗೆ ಇಲಾಖೆಯ ಯಾರೇ ಅಧಿಕಾರಿಯು, ಅಂಥ ವಿಚಾರಣೆ, ತನಿಖೆ ಅಥವಾ ಸಮೀಕ್ಷೆಯ ಉದ್ದೇಶಕ್ಕಾಗಿ ಅವನು ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ ಮೇರೆಗೆ ಯಾವುದೇ ಉದ್ದೇಶಕ್ಕಾಗಿ ತಾನು ಚಲಾಯಿಸಬಹುದಾದಂಥ ಯಾವುದೇ ಅಧಿಕಾರವನ್ನು (ಯಾವುದೇ ಅಧಿಕಾರವನ್ನು ಚಲಾಯಿಸಲು ಅಧಿಕೃತಗೊಳಿಸುವ ಅಧಿಕಾರವನ್ನು ಒಳಗೊಂಡು) ಚಲಾಯಿಸಬಹುದು ಮತ್ತು ಸದರಿ ಅಧಿನಿಯಮದ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕುದು.

**19. ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಧಿಕಾರ.**- (1) ಯಾವುದೇ ಸ್ವತ್ತನ್ನು ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಘೋಷಿಸಲಾಗಿರುವಲ್ಲಿ, ಅಥವಾ ಬಾಧಿತ ವ್ಯಕ್ತಿಯು, 9ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಬಾಕಿ ಇರುವ ಜುಲ್ಮಾನೆಯನ್ನು, ಆ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಲು ಅನುಮತಿಸಲಾಗಿರುವ ಕಾಲದೊಳಗೆ ಹಾಗೆ ಸಂದಾಯ ಮಾಡಲು ತಪ್ಪಿರುವಲ್ಲಿ, ಆ ಸಕ್ಷಮ ಪ್ರಾಧಿಕಾರಿಯು ಆ ಬಾಧಿತ ವ್ಯಕ್ತಿ ಮತ್ತು ಆ ಸ್ವತ್ತಿನ ಸ್ವಾಧೀನವನ್ನು ಹೊಂದಿರಬಹುದಾದ ಯಾರೇ ಇತರ ವ್ಯಕ್ತಿಗೆ, ಅದರ ಸ್ವಾಧೀನವನ್ನು ಆ ಸಕ್ಷಮ ಪ್ರಾಧಿಕಾರಿಗೆ ಅಥವಾ ಅವನು ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಗೆ ಆ ಆದೇಶವನ್ನು ಜಾರಿಗೊಳಿಸಿದ ಮೂವತ್ತು ದಿವಸದೊಳಗೆ ಒಪ್ಪಿಸಲು ಅಥವಾ ವಶಾವಣೆ ಮಾಡಲು ಆದೇಶಿಸಬಹುದು.

(2) ಯಾರೇ ವ್ಯಕ್ತಿಯು (1)ನೇ ಉಪಪ್ರಕರಣದ ಮೇರೆಗೆ ಮಾಡಿರುವ ಯಾವುದೇ ಆದೇಶವನ್ನು ಪಾಲಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ ಆ ಸಕ್ಷಮ ಪ್ರಾಧಿಕಾರಿಯು, ಆ ಸ್ವತ್ತಿನ ಸ್ವಾಧೀನವನ್ನು ತೆಗೆದುಕೊಳ್ಳಬಹುದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯಕವಾಗಬಹುದಾದಂಥ ಬಲವನ್ನು ಉಪಯೋಗಿಸಬಹುದು.

(3) (2)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಆ ಸಕ್ಷಮ ಪ್ರಾಧಿಕಾರಿಯು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಸ್ವತ್ತಿನ ಸ್ವಾಧೀನವನ್ನು ತೆಗೆದುಕೊಳ್ಳುವ ಉದ್ದೇಶಕ್ಕಾಗಿ, ಆ ಸಕ್ಷಮ ಪ್ರಾಧಿಕಾರಿಗೆ ನೆರವು ನೀಡಲು ಯಾವನೇ ಪೊಲೀಸು ಅಧಿಕಾರಿಯ ಸೇವೆಯನ್ನು ಕಡ್ಡಾಯವಾಗಿ ಕೋರಬಹುದು ಮತ್ತು ಅಂಥ ಕಡ್ಡಾಯ ಕೋರಿಕೆಯನ್ನು ಪಾಲಿಸುವುದು ಅಂಥ ಪೊಲೀಸ್ ಅಧಿಕಾರಿಯ ಕರ್ತವ್ಯವಾಗಿರತಕ್ಕುದು.

**20. ತಪ್ಪುಗಳನ್ನು ಸರಿಪಡಿಸುವುದು.**- ದಾಖಲೆಯಿಂದ ಕಂಡುಬರುವ ಯಾವುವೇ ತಪ್ಪುಗಳನ್ನು ಸರಿಪಡಿಸುವ ದೃಷ್ಟಿಯಿಂದ, ಸಂದರ್ಭಾನುಸಾರ ಆ ಸಕ್ಷಮ ಪ್ರಾಧಿಕಾರಿ ಅಥವಾ ಅಪೀಲು ನ್ಯಾಯಾಧಿಕರಣವು, ಅವನು/ಅದು ಮಾಡಿರುವ ಯಾವುದೇ ಆದೇಶವನ್ನು ಆ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ತಿದ್ದುಪಡಿ ಮಾಡಬಹುದು:

ಪರಂತು, ಯಾವುದೇ ಅಂಥ ತಿದ್ದುಪಡಿಯು ಯಾರೇ ವ್ಯಕ್ತಿಗೆ ಪ್ರತಿಕೂಲವಾಗಿ ಬಾಧಿಸುವ ಸಂಭವವಿದ್ದರೆ, ಅಂಥ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳುವ ಸೂಕ್ತ ಅವಕಾಶವನ್ನು ಕೊಟ್ಟಿರುವ ಹೊರತು ಅದನ್ನು ಮಾಡತಕ್ಕುದಲ್ಲ.

**21. ಇತರ ಕಾನೂನುಗಳ ಮೇರೆಗಿನ ನಿರ್ಣಯಗಳು ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳಿಗಾಗಿ ನಿರ್ಣಾಯಕವಾಗದಿರುವುದು.**- ಯಾವುದೇ ಇತರ ಕಾನೂನಿನ ಮೇರೆಗೆ, ಯಾವನೇ ಅಧಿಕಾರಿ ಅಥವಾ ಪ್ರಾಧಿಕಾರದ ಯಾವುದೇ ನಿರ್ಣಯವು ಈ ಅಧಿನಿಯಮದ ಮೇರೆಗಿನ ಯಾವುವೇ ವ್ಯವಹಾರಗಳ ಉದ್ದೇಶಗಳಿಗಾಗಿ ನಿರ್ಣಾಯಕವಾಗಿರತಕ್ಕುದಲ್ಲ.

**22. ನೋಟೀಸುಗಳು ಮತ್ತು ಆದೇಶಗಳ ಜಾರಿ.**- ಈ ಅಧಿನಿಯಮದ ಮೇರೆಗೆ ಕೊಟ್ಟ ಯಾವುದೇ ನೋಟೀಸು ಅಥವಾ ಮಾಡಿದ ಯಾವುದೇ ಆದೇಶವನ್ನು,-

(ಎ) ಯಾವ ವ್ಯಕ್ತಿಗೆ ಅದನ್ನು ಕೊಡಲು ಉದ್ದೇಶಿಸಲಾಗಿದೆಯೋ ಆ ವ್ಯಕ್ತಿಗೆ ಅಥವಾ ಅವನ ಏಜೆಂಟನಿಗೆ ಆ ನೋಟೀಸು ಅಥವಾ ಆದೇಶವನ್ನು ಕೊಡಮಾಡುವ ಅಥವಾ ಅದನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸುವ ಮೂಲಕ;

(ಬಿ) ಆ ನೋಟೀಸು ಅಥವಾ ಆದೇಶವನ್ನು (ಎ) ಖಂಡದಲ್ಲಿ ಉಪಬಂಧಿಸಿದ ರೀತಿಯಲ್ಲಿ ಜಾರಿಗೊಳಿಸಲು ಆಗದಿದ್ದರೆ, ಯಾವ ಸ್ವತ್ತಿಗೆ ಸಂಬಂಧಪಟ್ಟಂತೆ ಆ ನೋಟೀಸನ್ನು ಕೊಡಲಾಗಿದೆಯೋ ಅಥವಾ ಆದೇಶವನ್ನು ಮಾಡಲಾಗಿದೆಯೋ ಆ ಸ್ವತ್ತಿನ ಎದ್ದು ಕಾಣುವ ಸ್ಥಳದ ಮೇಲೆ, ಅಥವಾ ನೋಟೀಸನ್ನು ಕೊಡಲು ಉದ್ದೇಶಿಸಿದ್ದ ವ್ಯಕ್ತಿಯು ಕೊನೆಯಲ್ಲಿ ವಾಸವಾಗಿದ್ದನೆಂದು ಅಥವಾ ವ್ಯವಹಾರವನ್ನು ನಡೆಸುತ್ತಿದ್ದನೆಂದು ಅಥವಾ ವೈಯಕ್ತಿಕವಾಗಿ ಲಾಭಕ್ಕಾಗಿ ಕೆಲಸ ಮಾಡುತ್ತಿದ್ದನೆಂದು ಗೊತ್ತಿದ್ದಂಥ ಆವರಣದ ಯಾವುದೇ ಎದ್ದು ಕಾಣುವ ಭಾಗದ ಮೇಲೆ ಅದನ್ನು ಅಂಟಿಸುವ ಮೂಲಕ

-ಜಾರಿಗೊಳಿಸತಕ್ಕುದು.

**23. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.**- ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ವ್ಯವಹರಣೆಯನ್ನು ಹೂಡತಕ್ಕುದಲ್ಲ.

**24. ಅಧಿನಿಯಮವು ಅಧ್ಯಾರೋಹಿ ಪ್ರಭಾವವನ್ನು ಹೊಂದಿರುವುದು.**- ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅದಕ್ಕೆ ಅಸಂಗತವಾದುದು ಏನೇ ಅಡಕವಾಗಿದ್ದಾಗ್ಯೂ ಪರಿಣಾಮವನ್ನು ಹೊಂದಿರತಕ್ಕುದು.

**25. ಅಧಿನಿಯಮದ ಉಪಬಂಧಗಳು ನ್ಯಾಸವಾಗಿರುವ ಕೆಲವು ಸ್ವತ್ತುಗಳಿಗೆ ಅನ್ವಯಗೊಳ್ಳದಿರುವುದು.**- ಈ ಅಧಿನಿಯಮದಲ್ಲಿ ಅಡಕವಾಗಿರುವುದು ಯಾವುದೂ, ಪೂರ್ತಿಯಾಗಿ ಸಾರ್ವಜನಿಕ, ಧಾರ್ಮಿಕ ಅಥವಾ ಧರ್ಮಾರ್ಥ ಉದ್ದೇಶಗಳಿಗಾಗಿ ಸೃಜಿಸಲಾದ ಅಥವಾ ಸ್ಥಾಪಿತವಾದ ನ್ಯಾಸ ಅಥವಾ ಸಂಸ್ಥೆಯು ಧಾರಣ ಮಾಡಿರುವ ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ,-

(i) ಅಂಥ ನ್ಯಾಸ ಅಥವಾ ಸಂಸ್ಥೆಯ ಸ್ವತ್ತನ್ನು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚಿನ ದಿನಾಂಕದಿಂದ ಹಾಗೆ ಧಾರಣ ಮಾಡಿದ್ದರೆ, ಅಥವಾ

(ii) ಅಂಥ ಸ್ವತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಂಥ ನ್ಯಾಸ ಅಥವಾ ಸಂಸ್ಥೆಯು ಧಾರಣ ಮಾಡಿರುವ ಯಾವುದೇ ಸ್ವತ್ತಿಗೆ ಪೂರ್ತಿಯಾಗಿ ಪತ್ತೆ ಹಚ್ಚಬಹುದಾಗಿದ್ದರೆ

-ಅನ್ವಯವಾಗತಕ್ಕುದಲ್ಲ.

**26. ನಿಯಮ ರಚನಾಧಿಕಾರ.**– (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:–

(ಎ) 12ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷ ಮತ್ತು ಇತರ ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಎಎ) 12ನೇ ಪ್ರಕರಣದ (8)ನೇ ಉಪಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣದ ದಾಖಲೆಗಳು ಮತ್ತು ರಿಜಿಸ್ಟರುಗಳ ಪರಿಶೀಲನೆಗಾಗಿ ಅಥವಾ ಅದರ ಯಾವುದೇ ಭಾಗದ ಪ್ರಮಾಣೀಕೃತ ಪ್ರತಿಯನ್ನು ಪಡೆದುಕೊಳ್ಳುವುದಕ್ಕಾಗಿ ಸಂದಾಯ ಮಾಡತಕ್ಕಂಥ ಫೀಜು;

(ಬಿ) 15ನೇ ಪ್ರಕರಣದ (ಎಫ್) ಖಂಡದ ಮೇರೆಗೆ ಸಕ್ಷಮ ಪ್ರಾಧಿಕಾರಿ ಮತ್ತು ಅಪೀಲು ನ್ಯಾಯಾಧಿಕರಣವು ಚಲಾಯಿಸಬಹುದಾದ ಸಿವಿಲ್ ನ್ಯಾಯಾಲಯದ ಅಧಿಕಾರಗಳು;

(ಸಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕುದು, ಮತ್ತು ಅದನ್ನು ಹಾಗೆ ಇಡಲಾದ, ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

**27. ನಿರಸನ ಮತ್ತು ಉಳಿಸುವಿಕೆ.**– (1) ಕಳ್ಳಸಾಗಣೆದಾರರ ಮತ್ತು ವಿದೇಶೀ ವಿನಿಮಯದಲ್ಲಿ ಕೈಚಳಕ ತೋರಿಸುವವರ (ಸ್ವತ್ತಿನ ಮುಟ್ಟುಗೋಲು) ಅಧ್ಯಾದೇಶ, 1975 (1975ರ 20) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಹಾಗೆ ನಿರಸನಗೊಳಿಸಿದ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂಬುದಾಗಿ ಭಾವಿಸತಕ್ಕುದು.

* * * * *